# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## *ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ: 01-02-2017ರಂದು ನಡೆದ ಸಭೆಯ ನಡವಳಿಗಳು*

| ಹಾಜರಿದ್ದ ಸದಸ್ಯರುಗಳು | ಹಾಜರಿದ್ದ ಅಧಿಕಾರಿಗಳು |
|---|---|
| ಶ್ರೀಯುತರುಗಳಾದ : | |
| **ಎಂ.ಕೆ.ಗುಣಶೇಖರ್ – ಅಧ್ಯಕ್ಷರು** | ಕೌನ್ಸಿಲ್ ಕಾರ್ಯದರ್ಶಿ, |
| **ಬಿ.ಎನ್.ನಿತೀಶ್ ಪುರುಶೋತ್ತಮ – ಸದಸ್ಯರು** | ಮುಖ್ಯಲೆಕ್ಕಾಧಿಕಾರಿ, |
| **ಕೆ.ಎಂ.ಮಮತ – ಸದಸ್ಯರು** | ಮುಖ್ಯ ಆರ್ಥಿಕ ಅಧಿಕಾರಿ, |
| **ಜೆ.ಎನ್.ಶ್ರೀನಿವಾಸಮೂರ್ತಿ – ಸದಸ್ಯರು** | ಉಪ ನಿಯಂತ್ರಕರು (ಹಣಕಾಸು), |
| **ಎಂ.ಮಹದೇವ – ಸದಸ್ಯರು** | ವಿದ್ಯಾಧಿಕಾರಿ |
| **ಪದ್ಮಾವತಿ ನರಸಿಂಹಮೂರ್ತಿ – ಸದಸ್ಯರು** | ಉಪ ಕಾನೂನು ಅಧಿಕಾರಿ, |
| **ಮಮತ ಕೆ.ಬಿ. ವಾಸುದೇವ – ಸದಸ್ಯರು** | ಕಾರ್ಯಪಾಲಕ ಅಭಿಯಂತರರು (ಮಹದೇವಪುರ), (ಕೆಂಗೇರಿ), |
| **ಎಂ.ಪದ್ಮಾವತಿ ಶ್ರೀನಿವಾಸ್ – ಸದಸ್ಯರು** | ಸಹಾಯಕ ಕಾರ್ಯಪಾಲಕ ಅಭಿಯಂತರರು (ಗಿರಿನಗರ), (ಬಸವನಗುಡಿ), (ಪುಲಿಕೇಶಿನಗರ), |
| **ಎನ್.ಲೋಕೇಶ್ – ಸದಸ್ಯರು** | ಕಂದಾಯ ಅಧಿಕಾರಿ (ಮಹಾಲಕ್ಷ್ಮೀಪುರ) |
| **ಎಂ. ಶಶಿರೇಖಾ – ಸದಸ್ಯರು** | ಸಹಾಯಕ ಕಂದಾಯ ಅಧಿಕಾರಿ (ನಾಗಪುರ) |
| **ಬಿ.ಸುಮಂಗಲ – ಸದಸ್ಯರು** | ಸಂಬಂಧಪಟ್ಟ ಅಧಿಕಾರಿಗಳು |

*(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)*

### *01]. ವಿಷಯದ ಸಂಖ್ಯೆ: ತೆಆಸ್ಥಾಸ/50/2016-17*

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 01-08-2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, 2015-16 ನೇ ಸಾಲಿನ ಆಯವ್ಯಯದಲ್ಲಿ ಬಿಬಿಎಂಪಿಗೆ ಘೋಷಿಸಿರುವ ರೂ. 1500.00 ಕೋಟಿಗಳ ಅನುದಾನದ ಪೈಕಿ ಸರ್ಕಾರದ ಆದೇಶ ಸಂಖ್ಯೆ : ನಅಇ 279 ಎಸ್.ಎಫ್.ಸಿ 2015, ಬೆಂಗಳೂರು ದಿನಾಂಕ : 08.01.2016 ರಲ್ಲಿ ರೂ. 976.00 ಕೋಟಿಗಳ ಕ್ರಿಯಾಯೋಜನೆಗೆ ಅನುಮೋದನೆ ನೀಡಿದೆ. ಅದರಲ್ಲಿ ಕ್ರ.ಸಂ 1 ರಲ್ಲಿ ಬೆಂಗಳೂರು ನಗರದಲ್ಲಿ ಘನತ್ಯಾಜ್ಯ ಸಂಸ್ಕರಣ ಘಟಕಗಳ ಕಾರ್ಯಾರಂಭಕ್ಕೆ ರೂ. 200.00 ಕೋಟಿಗಳ ಅನುದಾನ ನಿಗಧಿಪಡಿಸಿದೆ. ಸರ್ಕಾರದ ಆದೇಶ ಸಂಖ್ಯೆ: ನಅಇ 238 ಎಸ್.ಎಫ್.ಸಿ 2016, ಬೆಂಗಳೂರು ದಿನಾಂಕ : 18-06-2016 ರಲ್ಲಿ ಮೇಲ್ಕಂಡ ರೂ. 200.00 ಕೋಟಿಗಳಲ್ಲಿ ವಾರ್ಡ್ ಸಂಖ್ಯೆ 40ರ ದೊಡ್ಡಬಿದರಕಲ್ಲು ಘಟಕ, ವಾರ್ಡ್ 198ರ ಲಿಂಗಧೀರನಹಳ್ಳಿ ಘಟಕ, ಸುಬ್ಬರಾಯನ ಪಾಳ್ಯ ಘಟಕ, ಸೀಗೆಹಳ್ಳಿ, ಕನ್ನಹಳ್ಳಿ ಘಟಕಗಳ ಒಟ್ಟು 32 ಕಾಮಗಾರಿಗಳ ಅಂದಾಜು ಮೊತ್ತ ರೂ. 66.00 ಕೋಟಿಗಳಿಗೆ ನಗರೋತ್ಥಾನ ಯೋಜನೆಯ ಲೆಕ್ಕಶೀರ್ಷಿಕೆ ಅಡಿ ಭರಿಸಲು ಅನುಮೋದನೆ ನೀಡಿದೆ. ನಗರೋತ್ಥಾನ ಯೋಜನೆಯ ಕಾಮಗಾರಿಗಳನ್ನು 2016-17ರ ಲೆಕ್ಕಶೀರ್ಷಿಕೆ "P-3106 ನಗರೋತ್ಥಾನ ಕಾಮಗಾರಿಗಳು" Current Works ಅಡಿ ಜಾಬ್‌ಸಂಖ್ಯೆ ನೀಡಬೇಕಿದೆ. ಕಾಮಗಾರಿಗಳಿಗೆ ಜಾಬ್‌ಸಂಖ್ಯೆ ನೀಡಲು ಮಾನ್ಯ ಆಯುಕ್ತರು ಆದೇಶಿಸಿರುತ್ತಾರೆ. 2016-17ರ ಆಯವ್ಯಯದಲ್ಲಿ (ಪುಟಸಂಖ್ಯೆ 184) ಲೆಕ್ಕಶೀರ್ಷಿಕೆ P-3106ನ CurrentWorks ಅಡಿ ಅನುದಾನ ಮೀಸಲಿರಿಸಿರುವುದಿಲ್ಲ. ಸರ್ಕಾರದ ಅನುಮೋದನೆಯಂತೆ ಕಾಮಗಾರಿಗಳನ್ನು ಸಾರ್ವಜನಿಕ ಹಿತದೃಷ್ಟಿಯಿಮದ ತುರ್ತಾಗಿ ಕೈಗೊಳ್ಳಬೇಕಿದೆ. ಆಯವ್ಯಯದಲ್ಲಿ ಅನುದಾನ ಮೀಸಲಿರಿಸದ ಕಾರಣ IFMS ತಂತ್ರಾಂಶದಲ್ಲಿ ಜಾಬ್‌ಸಂಖ್ಯೆ ನೀಡಲು ಅವಕಾಶವಿರುವುದಿಲ್ಲ. ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆ ನಿರೀಕ್ಷಿಸಿ 32 ಕಾಮಗಾರಿಗಳ ಮೊತ್ತ ರೂ. 6600.00 ಲಕ್ಷಗಳ

ಅನುದಾನವನ್ನು 2016-17ರ ಲೆಕ್ಕಶೀರ್ಷಿಕೆ P-3106ನ Current Works ಅಡಿ ಅಳವಡಿಸಿಕೊಂಡು 310-17-000026 ರಿಂದ 310-17-000057 ರವರೆಗೆ ಜಾಬ್‌ಸಂಖ್ಯೆ ನೀಡಲಾಗಿದೆ. ಘಟನೋತ್ತರ ಮಂಜೂರಾತಿಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***-ಮುಂದೂಡಿದೆ-***

## ***02]. ವಿಷಯದ ಸಂಖ್ಯೆ: ತೆಆಸ್ಥಾಸ/56/2016-17***

ಜಂಟಿ ಆಯುಕ್ತರು (ಆರೋಗ್ಯ) ರವರ ದಿನಾಂಕ: 22.08.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಜಂಟಿ ಆಯುಕ್ತರು (SWM) ರವರು ಕೋಗಿಲು-ಕಣ್ಣೂರು ಮುಖ್ಯರಸ್ತೆಯಿಂದ ಬೆಳ್ಳಹಳ್ಳಿ ವೈಜ್ಞಾನಿಕ ಘನತ್ಯಾಜ್ಯ ವಿಲೇವಾರಿ ಘಟಕಗಳಿಗೆ ಪರ್ಯಾಯ ರಸ್ತೆ ನಿರ್ಮಾಣ ಕಾಮಗಾರಿಯ ಅಂದಾಜು ಮೊತ್ತ ರೂ. 204.00 ಲಕ್ಷಗಳಿಗೆ ಕೇಂದ್ರ ಸರ್ಕಾರದ ಯೋಜನೆ **ಸ್ವಚ್ಚ ಭಾರತ್ ಮಿಷನ್** ಅಡಿಯಲ್ಲಿ ಬಿಡುಗಡೆಯಾಗಿರುವ **ರೂ. 41.15 ಕೋಟಿಗಳಲ್ಲಿ** ಜಾಬ್‌ಸಂಖ್ಯೆ ನೀಡಲು ಕೋರಿರುತ್ತಾರೆ. ಸದರಿ ಮೊತ್ತಕ್ಕೆ ಕ್ರಿಯಾಯೋಜನೆ ಲಭ್ಯವಿಲ್ಲದ ಬಗ್ಗೆ ಚರ್ಚಿಸಲಾಗಿ, ಅವಶ್ಯಕತೆಗೆ ಅನುಗುಣವಾಗಿ SWM ಕಾಮಗಾರಿ ಕೈಗೊಳ್ಳಬೇಕಿರುವುದರಿಂದ ಸದರಿ ಮೊತ್ತಕ್ಕೆ ಕ್ರಿಯಾಯೋಜನೆ ಸಿದ್ದಪಡಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ. ಮಾನ್ಯ ಆಯುಕ್ತರು ಕಾಮಗಾರಿ ಕೈಗೊಳ್ಳಲು ಜಾಬ್‌ಸಂಖ್ಯೆ ನೀಡಲು ಅನುಮೋದನೆ ನೀಡಿರುತ್ತಾರೆ.

2016-17ರ ಆಯವ್ಯಯದ (ಪುಟಸಂಖ್ಯೆ-180) ರಲ್ಲಿ ಕೇಂದ್ರ ಸರ್ಕಾರದ ಅನುದಾನದ ಕಾಮಗಾರಿಗಳು-ಸ್ವಚ್ಚ ಭಾರತ್ ಅಭಿಯಾನದ ಕಾಮಗಾರಿಗಳು ಪಿ-3112 ಅಡಿ ರೂ. 150.00 ಲಕ್ಷಗಳ ಅನುದಾನ ಮೀಸಲಿರಿಸಿದ್ದು, ರೂ. 41.15 ಕೋಟಿ ಅನುದಾನವನ್ನು ಈಗಾಗಲೆ ಬಿಡುಗಡೆಗೊಳಿಸಿರುವುದರಿಂದ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆ ನಿರೀಕ್ಷಿಸಿ, ಲೆಕ್ಕಶೀರ್ಷಿಕೆ ಪಿ-3112 ಅಡಿ ರೂ. 49.88 ಲಕ್ಷಗಳ ಅನುದಾನವನ್ನು ಅಳವಡಿಸಿಕೊಂಡು ರೂ. 199.88 ಲಕ್ಷಗಳಿಗೆ ಈಗಾಗಲೇ ಜಾಬ್‌ಸಂಖ್ಯೆ ನೀಡಲಾಗಿರುತ್ತದೆ. ಸದರಿ ಪ್ರಸ್ತಾವನೆ ಮೊತ್ತ ರೂ. 204.00 ಲಕ್ಷಗಳಾಗಿದ್ದು, ಜಾಬ್‌ಸಂಖ್ಯೆ ನೀಡಲು ರೂ. 204.00 ಲಕ್ಷಗಳ ಅನುದಾನದ ಕೊರತೆ ಇರುತ್ತದೆ. ಆಯವ್ಯಯದಲ್ಲಿ ಕೊರತೆ ಅನುದಾನಕ್ಕೆ IFMS ತಂತ್ರಾಂಶದಲ್ಲಿ ಜಾಬ್‌ಸಂಖ್ಯೆ ನೀಡಲು ಅವಕಾಶವಿರುವುದಿಲ್ಲ. ಈಗಾಗಲೇ ಸ್ವಚ್ಚ ಭಾರತ್ ಮಿಷನ್ ಯೋಜನೆಯಡಿ ರೂ. 41.15 ಕೋಟಿ ಅನುದಾನ ಬಿಡುಗಡೆಗೊಳಿಸಿರುವುದರಿಂದ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆ ನಿರೀಕ್ಷಿಸಿ ಲೆಕ್ಕಶೀರ್ಷಿಕೆ ಪಿ-3112 ಅಡಿ ರೂ. 204.00 ಲಕ್ಷಗಳ ಅನುದಾನವನ್ನು ಹೆಚ್ಚುವರಿಯಾಗಿ ಅಳವಡಿಸಿಕೊಂಡು ರೂ. 204.00 ಲಕ್ಷಗಳಿಗೆ 310-17-000058 ಜಾಬ್‌ಸಂಖ್ಯೆ ನೀಡಲಾಗಿದೆ. ಘಟನೋತ್ತರ ಮಂಜೂರಾತಿಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***-ಮುಂದೂಡಿದೆ-***

## ***03]. ವಿಷಯದ ಸಂಖ್ಯೆ: ತೆಆಸ್ಥಾಸ/80/2016-17***

ಆಯುಕ್ತರ ದಿನಾಂಕ: 19-08-2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕೇಂದ್ರ ಪುರಸ್ಕೃತ ಸ್ವಚ್ಛ ಭಾರತ್ ಮಿಷನ್ ಯೋಜನೆಯನ್ನು ಅನುಷ್ಠಾನಗೊಳಿಸಲು ಐಇಸಿ ಹಾಗೂ ಸಾಮರ್ಥ್ಯ ನಿರ್ಮಾಣದ ಚಟುವಟಿಕೆಗಳಿಗಾಗಿ ರೂ.1,50,00,000/- (ಒಂದು ಕೋಟಿ ಐವತ್ತು ಲಕ್ಷಗಳನ್ನು ಕೇಂದ್ರ ಸರ್ಕಾರವು ಸ್ವಚ್ಛ ಭಾರತ್ ಮಿಷನ್ ಅಡಿಯಲ್ಲಿ ರಾಜ್ಯ ಸಕಾರಕ್ಕೆ ಬಿಡುಗಡೆ ಮಾಡಿರುವ ನಿಧಿಯಿಂದ ಉಲ್ಲೇಖಿತ ಆದೇಶ (1)ರ ರೀತ್ಯಾ ಬಿಬಿಎಂಪಿ ಬಿಡುಗಡೆಗೊಳಿಸಲಾಗಿದೆ. ಎರಡನೇ ಹಂತದಲ್ಲಿ ರೂ.30,00,000/- (ಮೂವತ್ತು ಲಕ್ಷ ರೂಪಾಯಿಗಳು) ಗಳನ್ನು ಐಇಸಿ ಚಟುವಟಿಕೆ ನಡೆಸಲು ಪಾಲಿಕೆಗೆ ಉಲ್ಲೇಖ (2)ರ ರೀತ್ಯಾ

ಬಿಡುಗಡೆಗೊಳಿಸಲಾಗಿದೆ. (ಒಟ್ಟಾರೆ ರೂ.1,80,00,000/-, ಒಂದು ಕೋಟಿ ಎಂಭತ್ತು ಲಕ್ಷ ರೂಪಾಯಿಗಳು)
ಈಗಾಗಲೇ ಸಾರ್ವಜನಿಕ ಸಂಪರ್ಕಾಧಿಕಾರಿಗಳು ಘನತ್ಯಾಜ್ಯ ನಿರ್ವಹಣೆ ವಿಷಯಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ದಿನ ಪತ್ರಿಕೆಗಳಲ್ಲಿ ಜಾಹೀರಾತು, ವಾಹನ ನಿಲ್ದಾಣದ ಶೆಲ್ಟರ್‌ಗಳಲ್ಲಿ ಜಾಹೀರಾತು ಹಾಗೂ ಬೀದಿ ನಾಟಕಗಳನ್ನು ಏರ್ಪಡಿಸಿ ಬಿಬಿಎಂಪಿ ಖಾತೆಯಿಂದ ಹಣ ಖರ್ಚು ಮಾಡಿದ್ದು ವಿವರಗಳು ಈ ಕೆಳಕಂಡಂತಿದೆ:

1. ದಿನ ಪತ್ರಿಕೆಗಳಲ್ಲಿ ಜಾಹೀರಾತಿಗೆ – ರೂ.110 ಲಕ್ಷಗಳು
2. ಬಸ್ ನಿಲ್ದಾಣಗಳಲ್ಲಿ ಜಾಹೀರಾತಿಗಾಗಿ – ರೂ. 13 ಲಕ್ಷಗಳು
3. ಬೀದಿ ನಾಟಕಕ್ಕೆ – ರೂ. 51 ಲಕ್ಷಗಳು

**ಒಟ್ಟು – ರೂ.174 ಲಕ್ಷಗಳು**

**(ಒಟ್ಟು ನೂರಾ ಎಪ್ಪತ್ತಾನಾಲ್ಕು ಲಕ್ಷಗಳು ಮಾತ್ರ)**

ಇದೀಗ ಸ್ವಚ್ಛ ಭಾರತ್ ಅಭಿಯಾನದಡಿ ಐಇಸಿ ಹಾಗೂ ಸಾರ್ವಜನಿಕರಲ್ಲಿ ಜಾಗೃತಿ, ಸಾಮರ್ಥ್ಯ ನಿರ್ಮಾಣ, ಆಡಳಿತಾತ್ಮಕ ಮತ್ತು ಕಛೇರಿ ವೆಚ್ಚಗಳಿಗಾಗಿ ಬಂದಿರುವ 1.80 ಕೋಟಿ ರೂ.ಗಳ ಲೆಕ್ಕದಲ್ಲಿ ಪಾಲಿಕೆಯಿಂದ ಖರ್ಚು ಮಾಡಿರುವ ಹಣವನ್ನು ಮರುಪಾವತಿ ಮಾಡಿಕೊಂಡು ಲೆಕ್ಕಹೊಂದಾಣಿಕೆ ಮಾಡಿಕೊಳ್ಳಲು ಹಾಗೂ ಬಳಕೆ ಪ್ರಮಾಣ ಪತ್ರವನ್ನು ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಆಯುಕ್ತರ ದಿನಾಂಕ: 19.08.2016ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

***04]. ವಿಷಯದ ಸಂಖ್ಯೆ: ತೆಆಸ್ಥಾಸ/82/2016-17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 23-09-2016ರಲ್ಲಿ ಪ್ರಸ್ತಾಪಿಸಿರುವಂತೆ, ಸರ್ಕಾರದ ಆದೇಶ ಸಂಖ್ಯೆ ನಅಇ 279 ಎಸ್‌ಎಫ್‌ಸಿ 2015, ಬೆಂಗಳೂರು, ದಿನಾಂಕ 08-01-2016 ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹೊಸದಾಗಿ ಸೇರ್ಪಡೆಗೊಂಡಿರುವ ಹಿಂದಿನ 7 ನಗರಸಭೆ ಮತ್ತು 1 ಪುರಸಭೆಯ ವ್ಯಾಪ್ತಿಯಲ್ಲಿ ಹಿಂದುಳಿದ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಗೆ 2015-16 ನೇ ಸಾಲಿನ ಆಯವ್ಯಯದಲ್ಲಿ ಸರ್ಕಾರವು 250.00 ಕೋಟಿಗಳ ಅನುದಾನ ಘೋಷಿಸಿದೆ. ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರಕ್ಕೆ ರೂ. 2000.00 ಲಕ್ಷಗಳ ಅನುದಾನ ಹಂಚಿಕೆ ಮಾಡಿರುತ್ತದೆ. ಸರ್ಕಾರದ ಅನುಮೋದನೆಯಂತೆ 2015-16 ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ ಪಿ-3089 "ಪಾಲಿಕೆಗೆ ಹೊಸದಾಗಿ ಸೇರ್ಪಡೆಗೊಂಡ 7 ನಗರಸಭೆ ಮತ್ತು 1 ಪುರಸಭೆಗಳಲ್ಲಿ ವಿಶೇಷ ಅಭಿವೃದ್ಧಿ ಕಾಮಗಾರಿಗಳು" ಅಡಿ ಒಟ್ಟು ರೂ. 175.00 ಕೋಟಿಗಳಿಗೆ ಜಾಬ್‌ಸಂಖ್ಯೆ ನೀಡಲಾಗಿದೆ. ಉಳಿಕೆ ರೂ. 75.00 ಕೋಟಿಗಳಲ್ಲಿ ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರಕ್ಕೆ ರೂ. 20.00 ಕೋಟಿಗಳ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಲಾಗಿದೆ.
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸರ್ಕಾರದ ಆದೇಶ ಸಂಖ್ಯೆ: ನಅಇ/199/ಎಸ್.ಎಫ್.ಸಿ/2016 ಬೆಂಗಳೂರು ದಿನಾಂಕ: 21-06-2016 ರ ಆದೇಶದಲ್ಲಿ ನಗರೋತ್ಥಾನ ಮತ್ತು ವಿಶೇಷ ಮೂಲಭೂತ ಸೌಕರ್ಯ, ಕೆರೆಗಳು ಮೊತ್ತ ರೂ. 7300-00 ಕೋಟಿಗಳ ಕ್ರಿಯಾ ಯೋಜನೆ Annexure-1 to Annexure-18 ರ ವರೆಗೆ ಅನುಮೋದನೆ ನೀಡಿದ್ದು, Annexure-11 ರಲ್ಲಿ ಸರ್ಕಾರದ ಆದೇಶ ಸಂಖ್ಯೆ ನಅಇ 279 ಎಸ್‌ಎಫ್‌ಸಿ 2015, ಬೆಂಗಳೂರು, ದಿನಾಂಕ 08-01-2016 ರ ಆದೇಶದಂತೆ ಹಿಂದಿನ 7 ನಗರಸಭೆ ಮತ್ತು 1 ಪುರಸಭೆಯ ವ್ಯಾಪ್ತಿಯಲ್ಲಿ ಹಿಂದುಳಿದ ಪ್ರದೇಶಗಳಲ್ಲಿ

ಅಭಿವೃದ್ಧಿ ಕಾಮಗಾರಿಗಳಿಗೆ ರೂ. 250.00 ಕೋಟಿಗಳ ಅನುದಾನ ಒದಗಿಸಿದೆ. 2016–17 ನೇ ಸಾಲಿನ ಬಿ.ಬಿ.ಎಂ.ಪಿ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ–3089 "ಪಾಲಿಕೆಗೆ ಹೊಸದಾಗಿ ಸೇರ್ಪಡೆಗೊಂಡ 7 ನಗರಸಭೆ ಮತ್ತು 1 ಪುರಸಭೆಗಳಲ್ಲಿ ವಿಶೇಷ ಅಭಿವೃದ್ಧಿ ಕಾಮಗಾರಿಗಳು" ರಡಿ ಚಾಲ್ತಿ ಕಾಮಗಾರಿಗಳಿಗೆ ಅನುದಾನ ಮೀಸಲಿರಿಸಿರುವುದಿಲ್ಲ. ಸರ್ಕಾರದಿಂದ ಅನುದಾನ ಒದಗಿಸಿರುವುದರಿಂದ ಲೆಕ್ಕಶೀರ್ಷಿಕೆ ಪಿ–3089 ಅಡಿ ರೂ. 2000.00 ಲಕ್ಷಗಳ ಅನುದಾನವನ್ನು ಹೆಚ್ಚುವರಿಯಾಗಿ ಅಳವಡಿಸಿಕೊಳ್ಳಲು ಹಾಗೂ ಸದರಿ ಕ್ರಿಯಾ ಯೋಜನೆ ಸರ್ಕಾರದಿಂದ ಅನುಮೋದನೆಯಾದ ನಂತರ ಜಾಬ್‌ಸಂಖ್ಯೆ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 23.09.2016ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು. KRIDL ಮೂಲಕ ನಿರ್ವಹಿಸುವುದು.**

## ***05]. ವಿಷಯದ ಸಂಖ್ಯೆ: ತೆಆಸ್ಥಾಸ/92/2016–17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 22.11.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ವಾರ್ಡ್ 163, ಸ್ವತ್ತಿನ ಸಂಖ್ಯೆ 228, 1ನೇ ಅಡ್ಡ ರಸ್ತೆ, 2ನೇ ಬ್ಲಾಕ್, 3ನೇ ಘಟ್ಟ, ಬಿ.ಎಸ್.ಕೆ 3 ನೇ ಹಂತ ಇಲ್ಲಿ ಅನಧಿಕೃತ ಕಟ್ಟಡವನ್ನು ತೆರವುಗೊಳಿಸುವ ಕಾಮಗಾರಿಗಳ ಅಂದಾಜು ಮೊತ್ತ ರೂ. 1.00 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲು ಕಾ.ಪಾ.ಅ ಬಸವನಗುಡಿ ರವರು ಪ್ರಸ್ತಾವನೆ ಸಲ್ಲಿಸಿದ್ದು, ಸದರಿ ವೆಚ್ಚವನ್ನು 2016–17 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ0055 ಅಡಿ ಪರಿಗಣಿಸಬಹುದಾಗಿದೆ. ಕೆ.ಎಂ.ಸಿ ಕಾಯ್ದೆ 1976ರ ಸೆಕ್ಷನ್ 463(1) ರ ಪ್ರಕಾರ ಅನಧೀಕೃತ / ವ್ಯತಿರಿಕ್ತ ನಿರ್ಮಾಣವನ್ನು ತೆರವುಗೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳ್ಳಬೇಕಿದೆ. ಅನುದಾನದ ವಿವರಗಳು ಈ ಕೆಳಕಂಡಂತಿದೆ.

| **ಲೆಕ್ಕಶೀರ್ಷಿಕೆ: P- 0055 "Encroachment clearance Expenses ( Demolition charges)" Budget Book Page No. 111** (ರೂ. ಲಕ್ಷಗಳಲ್ಲಿ) | | | | |
|---|---|---|---|---|
| ಆಯವ್ಯಯದಲ್ಲಿ ಮೀಸಲಿಟ್ಟಿರುವ ಅನುದಾನ | ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅನುಮೋದನೆಯಂತೆ ಅನುದಾನ ಅಳವಡಿಸಿಕೊಂಡಿರುವ ಮೊತ್ತ | ಜಾಬ್‌ಸಂಖ್ಯೆ ನೀಡಿರುವ ಮೊತ್ತ | ಆಯವ್ಯಯದಲ್ಲಿ ಲಭ್ಯವಿರುವ ಅನುದಾನ | ಸದರಿ ಪ್ರಸ್ಥಾವನೆಯ ಮೊತ್ತ |
| **150.00** | **8.00** | **157.45** | **0.55** | **1.00** |

ಜಾಬ್‌ಸಂಖ್ಯೆ ನೀಡಲು ಪ್ರಸ್ಥಾವನೆ ಸಲ್ಲಿಸಿರುವ ಮೊತ್ತ ರೂ. 1.00 ಲಕ್ಷಗಳಿದ್ದು, ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ರೂ. 0.55 ಲಕ್ಷಗಳ ಅನುದಾನ ಮಾತ್ರ ಲಭ್ಯವಿರುತ್ತದೆ. ಅನುದಾನ ಕೊರತೆ ಇರುವುದರಿಂದ IFMS ತಂತ್ರಾಂಶದಲ್ಲಿ ಜಾಬ್‌ಸಂಖ್ಯೆ ನೀಡಲು ಅವಕಾಶವಿರುವುದಿಲ್ಲ. ತೆರವುವೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳ್ಳುವುದರಿಂದ 2016–17ರ ಪರಿಷ್ಕೃತ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ಕೊರತೆ ಮೊತ್ತವನ್ನು ಅಳವಡಿಸಿಕೊಳ್ಳಬೇಕಿದೆ. 2016–17ರ ಲೆಕ್ಕಶೀರ್ಷಿಕೆ ಪಿ–0055 ಅಡಿ ಕೊರತೆ ಅನುದಾನ ರೂ. 1.00 ಲಕ್ಷಗಳನ್ನು ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಅನುಮೋದನೆಗಾಗಿ ಮಂಡಿಸಲಾದ ಟಿಪ್ಪಣಿ.

***–ಮುಂದೂಡಿದೆ–***

## *06]. ವಿಷಯದ ಸಂಖ್ಯೆ: ತೆಆಸ್ಥಾಸ/94/2016-17*

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 23.11.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ವಾರ್ಡ್ 155, ಸ್ವತ್ತಿನ ಸಂಖ್ಯೆ 44 (ಹಳೆಯ ಸಂಖ್ಯೆ 289/24), 4ನೇ ಕ್ರಾಸ್, ಜೆ.ಪಿ. ರಾಜರತ್ನಮ ರಸ್ತೆ, ಹನುಮಂತನಗರ ಇಲ್ಲಿ ಅನಧಿಕೃತ ಕಟ್ಟಡವನ್ನು ತೆರವುಗೊಳಿಸುವ ಕಾಮಗಾರಿಗಳ ಅಂದಾಜು ಮೊತ್ತ ರೂ. 18.00 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲು ಕಾ.ಪಾ.ಅ ಬಸವನಗುಡಿ ರವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸದರಿ ವೆಚ್ಚವನ್ನು 2016-17 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ0055 ಅಡಿ ಪರಿಗಣಿಸಬಹುದಾಗಿದೆ. ಕೆ.ಎಂಸಿ ಕಾಯ್ದೆ 1976ರ ಸೆಕ್ಷನ್ 463(1) ರ ಪ್ರಕಾರ ಅನಧೀಕೃತ / ವ್ಯತಿರಿಕ್ತ ನಿರ್ಮಾಣವನ್ನು ತೆರವುಗೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳ್ಳಬೇಕಿದೆ. ಅನುದಾನದ ವಿವರಗಳು ಈ ಕೆಳಕಂಡಂತಿದೆ.

| **ಲೆಕ್ಕಶೀರ್ಷಿಕೆ: P- 0055 "Encroachment clearance Expenses ( Demolition charges)" Budget Book Page No. 111 (ರೂ. ಲಕ್ಷಗಳಲ್ಲಿ)** | | | | |
|---|---|---|---|---|
| ಆಯವ್ಯಯದಲ್ಲಿ ಮೀಸಲಿಟ್ಟಿರುವ ಅನುದಾನ | ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅನುಮೋದನೆಯಂತೆ ಅನುದಾನ ಅಳವಡಿಸಿಕೊಂಡಿರುವ ಮೊತ್ತ | ಜಾಬ್‌ಸಂಖ್ಯೆ ನೀಡಿರುವ ಮೊತ್ತ | ಆಯವ್ಯಯದಲ್ಲಿ ಲಭ್ಯವಿರುವ ಅನುದಾನ | ಸದರಿ ಪ್ರಸ್ಥಾವನೆಯ ಮೊತ್ತ |
| **150.00** | **8.00** | **157.45** | **0.55** | **18.00** |

ಜಾಬ್‌ಸಂಖ್ಯೆ ನೀಡಲು ಪ್ರಸ್ಥಾವನೆ ಸಲ್ಲಿಸಿರುವ ಮೊತ್ತ ರೂ. 18.00 ಲಕ್ಷಗಳಿದ್ದು, ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ರೂ. 0.55 ಲಕ್ಷಗಳ ಅನುದಾನ ಮಾತ್ರ ಲಭ್ಯವಿರುತ್ತದೆ. ಅನುದಾನ ಕೊರತೆ ಇರುವುದರಿಂದ IFMS ತಂತ್ರಾಂಶದಲ್ಲಿ ಜಾಬ್‌ಸಂಖ್ಯೆ ನೀಡಲು ಅವಕಾಶವಿರುವುದಿಲ್ಲ. ತೆರವುಗೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳ್ಳುವುದರಿಂದ 2016-17ರ ಪರಿಷ್ಕೃತ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ಕೊರತೆ ಮೊತ್ತವನ್ನು ಅಳವಡಿಸಿಕೊಳ್ಳಬೇಕಿದೆ. 2016-17ರ ಲೆಕ್ಕಶೀರ್ಷಿಕೆ ಪಿ-0055 ಅಡಿ ಕೊರತೆ ಅನುದಾನ ರೂ. 18.00 ಲಕ್ಷಗಳನ್ನು ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಅನುಮೋದನೆಗಾಗಿ ಮಂಡಿಸಲಾದ ಟಿಪ್ಪಣಿ.

***-ಮುಂದೂಡಿದೆ-***

## *07]. ವಿಷಯದ ಸಂಖ್ಯೆ: ತೆಆಸ್ಥಾಸ/96/2016-17*

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 24.11.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ವಾರ್ಡ್ 150ರ ವ್ಯಾಪ್ತಿಯ ಬೆಳ್ಳಂದೂರು ಗ್ರಾಮದ ಖಾತೆ ಸಂಖ್ಯೆ 1196/1205/1286/32/18 ರಲ್ಲಿ ಅನಧಿಕೃತ ಕಟ್ಟಡವನ್ನು ತೆರವುಗೊಳಿಸುವ ಕಾಮಗಾರಿಗಳ ವೆಚ್ಚ ರೂ. 3.00 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲು ಕಾ.ಪಾ.ಅ ಮಹದೇವಪುರ ರವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸದರಿ ವೆಚ್ಚವನ್ನು 2016-17 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ0055 ಅಡಿ ಪರಿಗಣಿಸಬಹುದಾಗಿದೆ. ಕೆ.ಎಂಸಿ ಕಾಯ್ದೆ 1976ರ ಸೆಕ್ಷನ್ 463(1) ರ ಪ್ರಕಾರ ಅನಧೀಕೃತ / ವ್ಯತಿರಿಕ್ತ ನಿರ್ಮಾಣವನ್ನು ತೆರವುಗೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳ್ಳಬೇಕಿದೆ. ಅನುದಾನದ ವಿವರಗಳು ಈ ಕೆಳಕಂಡಂತಿದೆ.

| ಲೆಕ್ಕಶೀರ್ಷಿಕೆ: P- 0055 "Encroachment clearance Expenses ( Demolition charges)" Budget Book Page No. 111 (ರೂ. ಲಕ್ಷಗಳಲ್ಲಿ) | | | | |
|---|---|---|---|---|
| ಆಯವ್ಯಯದಲ್ಲಿ ಮೀಸಲಿಟ್ಟಿರುವ ಅನುದಾನ | ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅನುಮೋದನೆಯಂತೆ ಅನುದಾನ ಅಳವಡಿಸಿಕೊಂಡಿರುವ ಮೊತ್ತ | ಜಾಬ್‌ಸಂಖ್ಯೆ ನೀಡಿರುವ ಮೊತ್ತ | ಆಯವ್ಯಯದಲ್ಲಿ ಲಭ್ಯವಿರುವ ಅನುದಾನ | ಸದರಿ ಪ್ರಸ್ತಾವನೆಯ ಮೊತ್ತ |
| **150.00** | **8.00** | **157.45** | **0.55** | **3.00** |

ಜಾಬ್‌ಸಂಖ್ಯೆ ನೀಡಲು ಪ್ರಸ್ತಾವನೆ ಸಲ್ಲಿಸಿರುವ ಮೊತ್ತ ರೂ. 3.00 ಲಕ್ಷಗಳಿದ್ದು, ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ರೂ. 0.55 ಲಕ್ಷಗಳ ಅನುದಾನ ಮಾತ್ರ ಲಭ್ಯವಿರುತ್ತದೆ. ಅನುದಾನ ಕೊರತೆ ಇರುವುದರಿಂದ IFMS ತಂತ್ರಾಂಶದಲ್ಲಿ ಜಾಬ್‌ಸಂಖ್ಯೆ ನೀಡಲು ಅವಕಾಶವಿರುವುದಿಲ್ಲ. ತೆರವುಗೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳ್ಳುವುದರಿಂದ 2016-17ರ ಪರಿಷ್ಕೃತ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ಕೊರತೆ ಮೊತ್ತವನ್ನು ಅಳವಡಿಸಿಕೊಳ್ಳಬೇಕಿದೆ. 2016-17ರ ಲೆಕ್ಕಶೀರ್ಷಿಕೆ ಪಿ-0055 ಅಡಿ ಕೊರತೆ ಅನುದಾನ ರೂ. 3.00 ಲಕ್ಷಗಳನ್ನು ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಅನುಮೋದನೆಗಾಗಿ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 24.11.2016ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

***08]. ವಿಷಯದ ಸಂಖ್ಯೆ: ತೆಆಸ್ಥಾಸ/98/2016-17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 25.10.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ವಾರ್ಡ್ 140ರಲ್ಲಿ ಸ್ವತ್ತಿನ ಸಂಖ್ಯೆ 59, 6ನೇ ಅಡ್ಡ ರಸ್ತೆ, ಚಾಮರಾಜಪೇಟೆ, ಬೆಂಗಳೂರು ಇಲ್ಲಿ ಮಂಜೂರಾತಿ ನಕ್ಷೆಗೆ ವ್ಯತಿರಿಕ್ತವಾಗಿ ನಿರ್ಮಿಸಿರುವ ಕಟ್ಟಡವನ್ನು ತೆರವುಗೊಳಿಸುವ ಕಾಮಗಾರಿಗಳ ಅಂದಾಜು ಮೊತ್ತ ರೂ. 6.00 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲು ಕಾ.ಪಾ.ಅ ಚಾಮರಾಜಪೇಟೆ' ರವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಕೆ.ಎಂಸಿ ಕಾಯ್ದೆ 1976ರ ಸೆಕ್ಷನ್ 463(1) ರ ಪ್ರಕಾರ ಅನಧೀಕೃತ/ ವ್ಯತಿರಿಕ್ತ ನಿರ್ಮಾಣವನ್ನು ತೆರವುಗೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳಬೇಕಿದೆ. ಸದರಿ ವೆಚ್ಚವನ್ನು 2016-17 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ0055 ಅಡಿ ಪರಿಗಣಿಸಬಹುದಾಗಿದೆ. ಅನುದಾನದ ವಿವರಗಳು ಈ ಕೆಳಕಂಡಂತಿದೆ.

| ಲೆಕ್ಕಶೀರ್ಷಿಕೆ: P- 0055 "Encroachment clearance Expenses ( Demolition charges)" Budget Book Page No. 111 (ರೂ. ಲಕ್ಷಗಳಲ್ಲಿ) | | | | |
|---|---|---|---|---|
| ಆಯವ್ಯಯದಲ್ಲಿ ಮೀಸಲಿಟ್ಟಿರುವ ಅನುದಾನ | ಜಾಬ್‌ಸಂಖ್ಯೆ ನೀಡಿರುವ ಮೊತ್ತ | ಜಾಬ್‌ಸಂಖ್ಯೆಗಾಗಿ ಅನುಮೋದನೆಗಾಗಿ ಕಡತ ಸಲ್ಲಿಸಿರುವ ಮೊತ್ತ | ಆಯವ್ಯಯದಲ್ಲಿ ಲಭ್ಯವಿರುವ ಅನುದಾನ | ಸದರಿ ಪ್ರಸ್ತಾವನೆಯ ಮೊತ್ತ |
| **150.00** | **149.25** | **0.00** | **0.75** | **6.00** |

ಜಾಬ್‌ಸಂಖ್ಯೆ ನೀಡಲು ಪ್ರಸ್ತಾವನೆ ಸಲ್ಲಿಸಿರುವ ಮೊತ್ತ ರೂ. 6.00 ಲಕ್ಷಗಳಿದ್ದು, ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ರೂ. 0.75 ಲಕ್ಷಗಳ ಅನುದಾನ ಮಾತ್ರ ಲಭ್ಯವಿರುತ್ತದೆ. ತೆರವುಗೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳ್ಳುವುದರಿಂದ ಮಾನ್ಯ ಆಯುಕ್ತರ ಆದೇಶದಂತೆ

ರೂ. 6.00 ಲಕ್ಷಗಳಿಗೆ 140-17-000006 ಜಾಬ್‌ಸಂಖ್ಯೆ ನೀಡಲಾಗಿದೆ. ಘಟನೋತ್ತರ ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

***-ಮುಂದೂಡಿದೆ-***

## ***09]. ವಿಷಯದ ಸಂಖ್ಯೆ: ತೆಆಸ್ಥಾಸ/101/2016-17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 21.12.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ವಾರ್ಡ್ 29, ಕಾಚರಕನಹಳ್ಳಿ ವ್ಯಾಪ್ತಿಯಲ್ಲಿ ಬರುವ ಸ್ವತ್ತಿನ ಸಂಖ್ಯೆ 465ಡಿ, ಜಲವಾಯು ವಿಹಾರ್, ಕಲ್ಯಾಣ ನಗರ (ಪೋ), ಬೆಂಗಳೂರು ಇಲ್ಲಿ ಮಂಜೂರಾತಿ ಪಡೆಯದೇ ಅನದೀಕೃತವಾಗಿ ಮೇಲ್ಛಾವಣೆ ಜಾಗದಲ್ಲಿ ಕಟ್ಟಡ ನಿರ್ಮಿಸಿದ್ದು, ಅನಧಿಕೃತ ಕಟ್ಟಡವನ್ನು ತೆರವುಗೊಳಿಸುವ ಕಾಮಗಾರಿಗಳ ಮೊತ್ತ ರೂ. 1.50 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲು ಕಾ.ಪಾ.ಅ (ಸರ್ವಜ್ಞನಗರ) ರವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸುವ ವೆಚ್ಚವನ್ನು 2016-17 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ0055 ಅಡಿ ಪರಿಗಣಿಸಬಹುದಾಗಿದೆ. ಕೆ.ಎಂಸಿ ಕಾಯ್ದೆ 1976ರ ಸೆಕ್ಷನ್ 463(1) ರ ಪ್ರಕಾರ ಅನಧೀಕೃತ / ವ್ಯತಿರಿಕ್ತ ನಿರ್ಮಾಣವನ್ನು ತೆರವುಗೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳ್ಳಬೇಕಿದೆ. 2016-17ರ ಆಯವ್ಯಯದ ಅನುದಾನದ ವಿವರಗಳು ಈ ಕೆಳಕಂಡಂತಿದೆ.

| **ಲೆಕ್ಕಶೀರ್ಷಿಕೆ: P- 0055 "Encroachment clearance Expenses ( Demolition charges)" /Budget Book Page No. 111 (ರೂ. ಲಕ್ಷಗಳಲ್ಲಿ)** | | | | |
|---|---|---|---|---|
| ಆಯವ್ಯಯದಲ್ಲಿ ಮೀಸಲಿಟ್ಟಿರುವ ಅನುದಾನ | ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅನುಮೋದನೆಯಂತೆ ಅನುದಾನ ಅಳವಡಿಸಿಕೊಂಡಿರುವ ಮೊತ್ತ | ಜಾಬ್‌ಸಂಖ್ಯೆ ನೀಡಿರುವ ಮೊತ್ತ | ಆಯವ್ಯಯದಲ್ಲಿ ಲಭ್ಯವಿರುವ ಅನುದಾನ | ಸದರಿ ಪ್ರಸ್ಥಾವನೆಯ ಮೊತ್ತ |
| **150.00** | **43.78** | **193.28** | **0.55** | **1.50** |

ಜಾಬ್‌ಸಂಖ್ಯೆ ನೀಡಲು ಪ್ರಸ್ಥಾವನೆ ಸಲ್ಲಿಸಿರುವ ಮೊತ್ತ ರೂ. 1.50 ಲಕ್ಷಗಳಿದ್ದು, ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ರೂ. 0.55 ಲಕ್ಷಗಳ ಅನುದಾನ ಮಾತ್ರ ಲಭ್ಯವಿರುತ್ತದೆ. ಅನುದಾನ ಕೊರತೆ ಇರುವುದರಿಂದ IFMS ತಂತ್ರಾಂಶದಲ್ಲಿ ಜಾಬ್‌ಸಂಖ್ಯೆ ನೀಡಲು ಅವಕಾಶವಿರುವುದಿಲ್ಲ. ತೆರವುಗೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳ್ಳುವುದರಿಂದ 2016-17ರ ಪರಿಷ್ಕೃತ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ಕೊರತೆ ಮೊತ್ತವನ್ನು ಅಳವಡಿಸಿಕೊಳ್ಳಬೇಕಿದೆ. 2016-17ರ ಲೆಕ್ಕಶೀರ್ಷಿಕೆ ಪಿ-0055 ಅಡಿ ಕೊರತೆ ಅನುದಾನ ರೂ. 1.50 ಲಕ್ಷಗಳನ್ನು ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

***-ಮುಂದೂಡಿದೆ-***

## ***10]. ವಿಷಯದ ಸಂಖ್ಯೆ: ತೆಆಸ್ಥಾಸ/105/2016-17***

ವಿಶೇಷ ಆಯುಕ್ತರು (ವಿದ್ಯೆ) ರವರ ದಿನಾಂಕ: 22.11.2016ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, 2014-15ನೇ ಸಾಲಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ವಿವಿಧ ವಾರ್ಡುಗಳಲ್ಲಿನ ಆಟದ ಮೈದಾನ / ಉದ್ಯಾನವನಗಳಲ್ಲಿ ಹೊಸದಾಗಿ ತಯಾರಿಸಿದ ಮಕ್ಕಳ ಆಟದ ಉಪಕರಣಗಳನ್ನು

ಸರಬರಾಜು ಮಾಡಿ ಅಳವಡಿಸುವ ಕಾರ್ಯಕ್ಕೆ ದಿನಾಂಕ: 11–03–2015ರಂದು ಇಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಿದ್ದು ಟೆಂಡರ್ ನಿಯಮಾವಳಿ ರೀತ್ಯ ದಿನಾಂಕ: 23–03–2015 ರಂದುತಾಂತ್ರಿಕ ಬಿಡ್‌ನ್ನು ತೆರೆಯಲಾಯಿತು. ಸದರಿ ಟೆಂಡರ್‌ನಲ್ಲಿ 1.ಮೆ॥ ಟಾಯ್ಸ್‌ಅಂಡ್ ಸ್ಪೋರ್ಟ್ಸ್ 2.ಮೆ॥ ವಿನ್ಯಾಸ್ ಪ್ಲೇ ಸಿಸ್ಟಮ್ಸ್ ಸಂಸ್ಥೆಯವರು ಭಾಗವಹಿಸಿರುತ್ತಾರೆ. ನಂತರ ಇಬ್ಬರು ಟೆಂಡರ್‌ದಾರರ ತಾಂತ್ರಿಕ ಬಿಡ್‌ನ ದಾಖಲೆಗಳನ್ನು ಪರಿಶೀಲಿಸಿ ವರದಿ ಸಲ್ಲಿಸಲು ತಾಂತ್ರಿಕ ಪರಿಶೀಲನ ಸಮಿತಿಯನ್ನು ರಚಿಸಿದ್ದು, ತಾಂತ್ರಿಕ ಪರಿಶೀಲನ ಸಮಿತಿ ರವರು ಇಬ್ಬರು ಟೆಂಡರ್‌ದಾರರ ದಾಖಲಾತಿಗಳನ್ನು ಪರಿಶೀಲಿಸಿ ಸಲ್ಲಿಸಿರುವ ವರದಿಯಲ್ಲಿ ಇಬ್ಬರು ಟೆಂಡರ್‌ದಾರರು ಸಲ್ಲಿಸಿರುವ ದಾಖಲಾತಿಗಳು ತೃಪ್ತಿಕರವಾಗಿರುವ ಬಗ್ಗೆ ಸ್ಪಷ್ಟ ವರದಿ ಸಲ್ಲಿಸಿರುತ್ತಾರೆ. ಈ ವರದಿಯ ಆಧಾರದ ಮೇಲೆ ಇಬ್ಬರು ಟೆಂಡರ್‌ದಾರರ ಆರ್ಥಿಕ ಬಿಡ್‌ನ್ನು ತೆರೆದು ದರಗಳ ತುಲನಾತ್ಮಕ ಪಟ್ಟಿಯನ್ನು ಸಿದ್ದಪಡಿಸಿ ಕಡತದಲ್ಲಿ ಲಗತ್ತಿಸಿದೆ.

**ಟೆಂಡರ್‌ದಾರರು ಸಲ್ಲಿಸಿರುವ ತುಲನಾತ್ಮಕ ಪಟ್ಟಿ**

| ಕ್ರ, ಸಂ | ಸಂಸ್ಥೆಯ ಹೆಸರು | ಮಲ್ಟಿ ಪ್ಲೇ ಸಿಸ್ಟಮ್ | ಲಾಸ್ಟ್ ಪುಲ್‌ಡೌನ್ | ಚೆಸ್ಟ್ ಪ್ರಸ್ | ಹಿಪ್ ಸಿವೆಲ್ | ಒಟ್ಟು |
|---|---|---|---|---|---|---|
| 1 | ಮೆ॥ ಟಾಯ್ಸ್‌ಅಂಡ್ ಸ್ಪೋರ್ಟ್ಸ್ (ಎಲ್1) | 11,07,000 | 1,72,200 | 1,66,500 | 1,20,000 | 15,65,700 |
| 2 | ಮೆ॥ ವಿನ್ಯಾಸ್ ಪ್ಲೇ ಸಿಸ್ಟಮ್ಸ್ | 11,55,000 | 1,67,000 | 1,62,600 | 1,17,000 | 16,01,600 |

ಟೆಂಡರ್ ಪಾರದರ್ಶಕ ಕಾಯ್ದೆ ನಿಯಮಾವಳಿ ರೀತ್ಯ ಮೆ॥ ಟಾಯ್ಸ್ ಅಂಡ್ ಸ್ಪೋರ್ಟ್ಸ್ ಸಂಸ್ಥೆಯವರು (ಎಲ್1) ಆಗಿದ್ದು ಅಂಗೀಕೃತ ಟೆಂಡರ್‌ದಾರರಾಗಿರುವುದರಿಂದ ವಿವಿಧ ವಾರ್ಡುಗಳಲ್ಲಿನ ಆಟದ ಮೈದಾನ / ಉದ್ಯಾನವನಗಳಲ್ಲಿ ಹೊಸದಾಗಿ ತಯಾರಿಸಿದ ಮಕ್ಕಳ ಆಟದ ಉಪಕರಣಗಳನ್ನು ಸರಬರಾಜು ಮಾಡಿ ಅಳವಡಿಸುವ ಕಾರ್ಯಕ್ಕೆ ಕಾರ್ಯಾದೇಶ ನೀಡಿದ್ದು ಸದರಿಯವರು ಕಾರ್ಯಾದೇಶದಲ್ಲಿ ಸೂಚಿಸಿರುವ ರೀತ್ಯ ಸಂಪೂರ್ಣ ಕಾರ್ಯವನ್ನು ತೃಪ್ತಿಕರವಾಗಿ ನಿರ್ವಹಿಸಿದ್ದು ಸದರಿ ಕಾರ್ಯದ ಬಿಲ್ಲಿನ ಸಂಖ್ಯೆ 271 ದಿನಾಂಕ: 07.01.2016 ರಲ್ಲಿ ಬಿಲ್ಲಿನ ಮೊತ್ತ ರೂ. 1,99,09,300 ಗಳನ್ನು ಬಿಲ್ಲಿನ ಹಣ ಪಾವತಿಗಾಗಿಕೋರಿಕೆ ಸಲ್ಲಿಸಿದ್ದು ಸದರಿಯವರ ಕೋರಿಕೆಯ ಮೇರೆಗೆ ಎಂ.ಸಿ.ಇ.4 ರ ನಮೂನೆಯಲ್ಲಿ ಡಿ.ಸಿ.ಬಿಲ್ ಮೊತ್ತ ರೂ. 1,99,09,300 ಗಳಿಗೆ ಬಿಲ್ಲಿನ ಹಣ ಪಾವತಿಗೆ ಮುಖ್ಯ ಲೆಕ್ಕಾಧಿಕಾರಿರವರಿಗೆ ಮಂಡಿಸಲಾಗಿತ್ತು.

2016–17ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆಯಡಿ ಅನುದಾನ ಲಭ್ಯವಿಲ್ಲವೆಂದು ಸೂಚಿಸಿರುವುದರಿಂದ ಮೆ॥ ಟಾಯ್ಸ್ ಅಂಡ್ ಸ್ಪೋರ್ಟ್ಸ್ ಸಂಸ್ಥೆಯವರಿಗೆ ಸದರಿ ಕಾರ್ಯದ ಬಿಲ್‌ನ ಮೊತ್ತ ರೂ. 1,99,09,300 ಗಳನ್ನು 2016–17ನೇ ಸಾಲಿನ ಆಯವ್ಯಯ 25 ಶಿಕ್ಷಣ ಪಿ0242 ರಲ್ಲಿ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿಯೂಟ ಹಾಗೂ ಹೆಲ್ತ್ ಚೆಕ್ ಅಪ್ ಶೀರ್ಷಿಕೆಯಡಿ ಒಟ್ಟು ರೂ. 200.00 ಲಕ್ಷಗಳು ಲಭ್ಯವಿದ್ದು, ಸದರಿ ಮೊತ್ತದಲ್ಲಿ ಬಿಲ್ಲಿನ ಮೊತ್ತ ರೂ.1,99,09,300 ಗಳನ್ನು ಪುನರ್ವಿನಿಯೋಗ ಪಡಿಸಿಕೊಳ್ಳುವ ಬಗ್ಗೆ ಶಿಕ್ಷಣ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮತ್ತು ಕೌನ್ಸಿಲ್ ನಿರ್ಣಯಕ್ಕೆ ಮಂಡಿಸಿರುವ **ವಿಶೇಷ ಆಯುಕ್ತರು (ವಿದ್ಯೆ) ರವರ ದಿನಾಂಕ: 22.11.2016ರ ಟಿಪ್ಪಣಿಯನ್ನು ಮಾನ್ಯ ಆಯುಕ್ತರ ದಿನಾಂಕ: 05.05.216ರ ನಡವಳಿಯಲ್ಲಿನ ಆರ್ಥಿಕ ಅಧಿಕಾರದ ಪ್ರತ್ಯಾಯೋಜನೆಯ ಅನ್ವಯ ಚರ್ಚಿಸಿ ಒಪ್ಪಿರುವ ಶಿಕ್ಷಣ ಸ್ಥಾಯಿ ಸಮಿತಿಯ ದಿನಾಂಕ: 16.12.2016ರ ಸಭೆಯ ನಿರ್ಣಯ.**

**ನಿರ್ಣಯ: ವಿಶೇಷ ಆಯುಕ್ತರು (ವಿದ್ಯೆ) ರವರ ದಿನಾಂಕ: 22.11.2016ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

## *11]. ವಿಷಯದ ಸಂಖ್ಯೆ: ತೆಆಸ್ಥಾಸ/110/2016-17*

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 28.12.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ವಾರ್ಡ್ 118, ಲಾಲ್‌ಬಾಗ್ ರಸ್ತೆ, ಸ್ವತ್ತಿನ ಸಂಖ್ಯೆ 150 ಇಲ್ಲಿ ಮಂಜೂರಾದ ನಕ್ಷೆಗೆ ವ್ಯತಿರಿಕ್ತವಾಗಿ ಕಟ್ಟಡ ನಿರ್ಮಾಣ ಮಾಡಿದ್ದು, ಅನಧಿಕೃತ ಕಟ್ಟಡವನ್ನು ತೆರವುಗೊಳಿಸುವ ಕಾಮಗಾರಿಗಳ ವೆಚ್ಚ ಕಾಮಗಾರಿಗಳ ಮೊತ್ತ ರೂ. 4.00 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲು ಕಾ.ಪಾ.ಅ (ಚಿಕ್ಕಪೇಟೆ) ರವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸುವ ವೆಚ್ಚವನ್ನು 2016-17ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ0055 ಅಡಿ ಪರಿಗಣಿಸಬಹುದಾಗಿದೆ. ಕೆ.ಎಂಸಿ ಕಾಯ್ದೆ 1976ರ ಸೆಕ್ಷನ್ 463(1) ರ ಪ್ರಕಾರ ಅನಧೀಕೃತ/ವ್ಯತಿರಿಕ್ತ ನಿರ್ಮಾಣವನ್ನು ತೆರವುಗೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳ್ಳಬೇಕಿದೆ. 2016-17ರ ಆಯವ್ಯಯದ ಅನುದಾನದ ವಿವರಗಳು ಈ ಕೆಳಕಂಡಂತಿದೆ.

| **ಲೆಕ್ಕಶೀರ್ಷಿಕೆ: P- 0055 "Encroachment clearance Expenses ( Demolition charges)" /Budget Book Page No. 111 (ರೂ. ಲಕ್ಷಗಳಲ್ಲಿ)** | | | | |
|---|---|---|---|---|
| ಆಯವ್ಯಯದಲ್ಲಿ ಮೀಸಲಿಟ್ಟಿರುವ ಅನುದಾನ | ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅನುಮೋದನೆಯಂತೆ ಅನುದಾನ ಅಳವಡಿಸಿಕೊಂಡಿರುವ ಮೊತ್ತ | ಜಾಬ್‌ಸಂಖ್ಯೆ ನೀಡಿರುವ ಮೊತ್ತ | ಆಯವ್ಯಯದಲ್ಲಿ ಲಭ್ಯವಿರುವ ಅನುದಾನ | ಸದರಿ ಪ್ರಸ್ತಾವನೆಯ ಮೊತ್ತ |
| **150.00** | **43.78** | **193.28** | **0.55** | **4.00** |

ಜಾಬ್‌ಸಂಖ್ಯೆ ನೀಡಲು ಪ್ರಸ್ಥಾವನೆ ಸಲ್ಲಿಸಿರುವ ಮೊತ್ತ ರೂ. 4.00 ಲಕ್ಷಗಳಿದ್ದು, ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ರೂ. 0.55 ಲಕ್ಷಗಳ ಅನುದಾನ ಮಾತ್ರ ಲಭ್ಯವಿರುತ್ತದೆ. ಅನುದಾನ ಕೊರತೆ ಇರುವುದರಿಂದ IFMS ತಂತ್ರಾಂಶದಲ್ಲಿ ಜಾಬ್‌ಸಂಖ್ಯೆ ನೀಡಲು ಅವಕಾಶವಿರುವುದಿಲ್ಲ. ತೆರವುವೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳ್ಳುವುದರಿಂದ 2016-17ರ ಪರಿಷ್ಕೃತ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ಕೊರತೆ ಮೊತ್ತವನ್ನು ಅಳವಡಿಸಿಕೊಳ್ಳಬೇಕಿದೆ. 2016-17ರ ಲೆಕ್ಕಶೀರ್ಷಿಕೆ ಪಿ-0055 ಅಡಿ ಕೊರತೆ ಅನುದಾನ ರೂ. 4.00 ಲಕ್ಷಗಳನ್ನು ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

*-ಮುಂದೂಡಿದೆ-*

## *12]. ವಿಷಯದ ಸಂಖ್ಯೆ: ತೆಆಸ್ಥಾಸ/120/2016-17*

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 13.01.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಸರ್ಕಾರವು 2015-16ನೇ ಸಾಲಿಗೆ ಬಿಬಿಎಂಪಿಗೆ ಘೋಷಿಸಿರುವಂತೆ ಬಿಬಿಎಂಪಿಗೆ ಹೊಸದಾಗಿ ಸೇರ್ಪಡೆಗೊಂಡಿರುವ ಹಿಂದಿನ 7 ನಗರಸಭೆ ಮತ್ತು 1 ಪುರಸಭೆಯ ಸಮಗ್ರ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರದ ಆದೇಶ ಸಂಖ್ಯೆ 279 ನಅಈ ಎಸ್.ಎಫ್.ಸಿ 2015, ಬೆಂಗಳೂರು, ದಿನಾಂಕ: 08-1-2016 ರಲ್ಲಿ ರೂ. 250.00 ಕೋಟಿಗಳ ವಿಶೇಷ ಅನುದಾನಗಳ ಪೈಕಿ ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕೈಗೊಳ್ಳುವ ರೂ.15.00 ಕೋಟಿಗಳ 39 ಕಾಮಗಾರಿಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಆದೇಶಿಸಿರುತ್ತಾರೆ.

ಸರ್ಕಾರದ ಪತ್ರ ಸಂಖ್ಯೆ ನಇ 73 ಎಸ್‌ಎಫ್‌ಸಿ 2016, ದಿನಾಂಕ: 20-02-2016 ರಲ್ಲಿ ಮೇಲ್ಕಂಡಂತೆ ದಾಸರಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ಒದಗಿಸಿರುವ ರೂ. 15.00 ಕೋಟಿಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡಿ ಕಾಮಗಾರಿ ಅನುಷ್ಠಾನಗೊಳಿಸಲು ಆದೇಶಿಸಿರುತ್ತದೆ. ಮುಖ್ಯ ಅಭಿಯಂತರರು

(ದಾಸರಹಳ್ಳಿ) ರವರು 39 ಕಾಮಗಾರಿಗಳ ಅಂದಾಜು ಮೊತ್ತ ರೂ. 15.00 ಕೋಟಿಗಳಿಗೆ ಜಾಬ್‌ಸಂಖ್ಯೆ ನೀಡಲು ಕೋರಿರುತ್ತಾರೆ.

2016–17ರ ಆಯವ್ಯಯದ ಸರ್ಕಾರದ ಅನುದಾನದ ಲೆಕ್ಕಶೀರ್ಷಿಕೆ 7 ನಗರಸಭೆ ಮತ್ತು 1 ಪುರಸಭೆಯ ವ್ಯಾಪ್ತಿಯಲ್ಲಿ ಹಿಂದುಳಿದ ಪ್ರದೇಶಗಳಲ್ಲಿ ಅಭಿವೃದ್ಧಿ ಪಿ–3089 ಅಡಿ ಚಾಲ್ತಿ ಕಾಮಗಾರಿಗಳಿಗಾಗಿ ಅನುದಾನ ಮೀಸಲಿರಿಸಿರುವುದಿಲ್ಲ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸರ್ಕಾರದ ಆದೇಶ ಸಂಖ್ಯೆ: ನಅಇ/199/ಎಸ್.ಎಫ್.ಸಿ/2016 ಬೆಂಗಳೂರು ದಿನಾಂಕ: 21–06–2016 ರ ಆದೇಶದಲ್ಲಿ ನಗರೋತ್ಥಾನ ಮತ್ತು ವಿಶೇಷ ಮೂಲಭೂತ ಸೌಕರ್ಯ, ಕೆರೆಗಳು ಮೊತ್ತ ರೂ. 7300–00 ಕೋಟಿಗಳ ಕ್ರಿಯಾ ಯೋಜನೆ Annexure-1 to Annexure-18 ರ ವರೆಗೆ ಅನುಮೋದನೆ ನೀಡಿದೆ. Annexure-11 ರಲ್ಲಿ ಮುಂದುವರೆದ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರದ ಆದೇಶ ಸಂಖ್ಯೆ 279 ನಅಇ ಎಸ್.ಎಫ್.ಸಿ 2015, ಬೆಂಗಳೂರು, ದಿನಾಂಕ: 08–1–2016 ರಲ್ಲಿ ಅನುಮೋದಿಸಿರುವಂತೆ 7 ನಗರಸಭೆ ಮತ್ತು 1 ಪುರಸಭೆಯ ವ್ಯಾಪ್ತಿಯಲ್ಲಿ ಹಿಂದುಳಿದ ಪ್ರದೇಶಗಳನ್ನು ಅಭಿವೃದ್ಧಿಪಡಿಸಲು ರೂ. 250.00 ಕೋಟಿಗಳ ಅನುದಾನ ಒದಗಿಸಿದೆ. 2016–17ರ ಆಯವ್ಯಯದ ಲೆಕ್ಕಶೀರ್ಷಿಕೆ ಪಿ–3089 ಅಡಿ ಚಾಲ್ತಿ ಕಾಮಗಾರಿಗಳಿಗಾಗಿ

ಅನುದಾನ ಮೀಸಲಿರಿಸದೇ ಇರುವುದರಿಂದ IFMS ತಂತ್ರಾಂಶದಲ್ಲಿ ಜಾಬ್‌ಸಂಖ್ಯೆ ನೀಡಲು ಅವಕಾಶವಿರುವುದಿಲ್ಲ. 2016–17ರ ಲೆಕ್ಕಶೀರ್ಷಿಕೆ ಪಿ–3089 ರ ಚಾಲ್ತಿ ಕಾಮಗಾರಿಗಳು ಅಡಿ ರೂ. 15.00 ಕೋಟಿಗಳ ಅನುದಾನ ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 13.01.2017ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

### ***13]. ವಿಷಯದ ಸಂಖ್ಯೆ: ತೆಆಸ್ಥಾಸ/121/2016–17***

ಆಯುಕ್ತರ ದಿನಾಂಕ: 12.01.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಅಧ್ಯಕರು ಜಯನಗರ ಶೈಕ್ಷಣಿಕ ಸಮಿತಿ ರವರು 2016–17ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 24, ಪಿ ಕೋಡ್ 0048ರ ಅಡಿಯಲ್ಲಿ ಅನುದಾನವನ್ನು ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಸಲುವಾಗಿ ಅನದಾನವನ್ನು ಕೋರಿರುತಾರೆ. ಸದರಿಯವರು ಕೋರಿರುವ ಮನವಿಯನ್ನು ಪರಿಶೀಲಿಸಿ 2016–17ನೇ ಸಾಲಿನಲ್ಲಿ ಸಂಸ್ಕೃತಿ ಮತ್ತು ಕ್ರೀಡಾ ಲೆಕ್ಕಶೀರ್ಷಿಕೆ 24 ರಲ್ಲಿನ ಪಿ ಕೋಡ್ 0048ರ ಅನುಬಂಧ–2ರಲ್ಲಿ ಕ್ರಮಸಂಖ್ಯೆ 28ರಲ್ಲಿ ರೂ.5.00 (ಐದು) ಲಕ್ಷಗಳನ್ನು ಮೀಸಲಿರಿಸಿದ್ದು ಸದರಿ ಸಂಸ್ಥೆಯವರು ಕೋರಿರುವ ಮೊತ್ತವನ್ನು ಬಿಡುಗಡೆ ಮಾಡಲು ಕೋರಿರುತ್ತಾರೆ

ತತ್ಸಂಬಂಧ ಸದರಿ ಸಂಸ್ಥೆಯವರು ಸಾಂಸ್ಕೃತಿಕ ಹಾಗು ಶೈಕ್ಷಣಿಕ ಕಾರ್ಯಕ್ರಮಗಳಿಗೆ ಆಯವ್ಯಯ 2016–17ನೇ ಸಾಲಿನಲ್ಲಿ ಸಂಸ್ಕೃತಿ ಮತ್ತು ಕ್ರೀಡಾ ಲೆಕ್ಕಶೀರ್ಷಿಕೆ 24 ರಲ್ಲಿನ ಪಿ ಕೋಡ್ 0048ರ ಅನುಬಂಧ–2ರಲ್ಲಿ ಕ್ರಮ ಸಂಖ್ಯೆ 28ರಲ್ಲಿ ರೂ.5.00 (ಐದು) ಲಕ್ಷಗಳನ್ನು ಮೀಸಲಿರಿಸಿದ್ದು ಸದರಿ ಮೊತ್ತವನ್ನು ಬಿಡುಗಡೆ ಮಾಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಆಯುಕ್ತರ ದಿನಾಂಕ: 12.01.2017ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

## *14]. ವಿಷಯದ ಸಂಖ್ಯೆ: ತೆಆಸ್ಥಾಸ/122/2016-17*

ಆಯುಕ್ತರ ದಿನಾಂಕ: 11.01.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಕನ್ನಡ ಕಲಾ ಜ್ಯೋತಿ ಯುವಕರ ಸಂಘ (ರಿ) ರಾಜ್ಯ ಮಟ್ಟದ ಪುರುಷರು ಮತ್ತು ಮಹಿಳೆಯರ ಕುಸ್ತಿ ಪಂದ್ಯಾವಳಿಯನ್ನು ನಡೆಸಲು ಅನುದಾನವನ್ನು ಬಿಡುಗಡೆ ಮಾಡುವ ಸಂಬಂಧ ಶ್ರೀ ಸತ್ಯನಾರಾಯಣ ಆರ್.ಎಸ್. ಮಾನ್ಯ ಆಡಳಿತ ಪಕ್ಷದ ನಾಯಕರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ಮನವಿಯನ್ನು ಸಲ್ಲಿಸಿ 2016-17ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ048ರಲ್ಲಿ ನಿಗಧಿಪಡಿಸಿರುವ ಮೊತ್ತದಲ್ಲಿ ಸದರಿ ಸಂಘದವರಿಗೆ 8.00 ಲಕ್ಷದ ಅನುದಾನವನ್ನು ಬಿಡುಗಡೆ ಮಾಡಲು ಕೋರಿರುತ್ತಾರೆ. (ಮನವಿ ಪತ್ರವನ್ನು ಪುಟದ ಸಂಖ್ಯೆ (2) ರಲ್ಲಿ ಲಗತ್ತಿಸಿದೆ)

ಮುಂದುವರೆದು 2016-17ನೇ ಸಾಲಿನ ಲೆಕ್ಕಶೀರ್ಷಿಕೆ 24 ಸಂಸ್ಕೃತಿ ಮತ್ತು ಕ್ರೀಡೆ ಅಡಿಯಲ್ಲಿ ಪಿ0048 ರಲ್ಲಿನ ಕೊಡುಗೆಗಳು ಮತ್ತು ಸಹಾಯಧನ ಶೀರ್ಷಿಕೆಯಲ್ಲಿ 230.00 ಲಕ್ಷಗಳನ್ನು ಮೀಸಲಿರಿಸಿದ್ದು ಮೇಲಿನ ಸಂಸ್ಥೆಯವರು ಕೋರಿರುವ ಸಹಾಯಧನವನ್ನು ಬಿಡುಗಡೆ ಮಾಡುವ ಬಗ್ಗೆ ಕ್ರಮಕೈಗೊಳ್ಳಲು ಮಾನ್ಯ ವಿಶೇಷ ಆಯುಕ್ತರು (ಶಿಕ್ಷಣ) ರವರ ಮೌಖಿಕ ಆದೇಶದಂತೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ ಟಿಪ್ಪಣಿಯನ್ನು ಮಂಡಿಸಲು ಆದೇಶಿಸಿರುವ ಮೇರೆಗೆ ಸದರಿ ಸಂಸ್ತೆಯವರಿಗೆ ಹಣ ಬಿಡುಗಡೆ ಮಾಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: 2016-17ನೇ ಸಾಲಿನ ಆಯವ್ಯಯ ಅನುಬಂಧ-2ರಲ್ಲಿ ಸದರಿ ಸಂಸ್ಥೆಗೆ ಹಂಚಿಕೆ ಮಾಡಲಾಗಿರುವ ರೂ.8.00 (ಎಂಟು ಲಕ್ಷ ಮಾತ್ರ) ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡಲು ಸಮಿತಿಯು ಒಪ್ಪಿತು.**

## *15]. ವಿಷಯದ ಸಂಖ್ಯೆ: ತೆಆಸ್ಥಾಸ/123/2016-17*

ಆಯುಕ್ತರ ದಿನಾಂಕ: 11.01.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಾನೂನು ಕೋಶದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ.ಕೆ.ಡಿ.ದೇಶಪಾಂಡೆ ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಈ ಹಿಂದೆ ನ್ಯಾಯಾಂಗ ಇಲಾಖೆಯಲ್ಲಿ ಜಿಲ್ಲಾ ನ್ಯಾಯಾಧೀಶರಾಗಿ ದಿನಾಂಕ: 31-08-2010ರಂದು ವಯೋ ನಿವೃತ್ತಿಯನ್ನು ಹೊಂದಿರುತ್ತಾರೆ. ಸದರಿ ನ್ಯಾಯಾಧೀಶರು ನಿವೃತ್ತಿಯ ನಿಕಟ ಪೂರ್ವದಲ್ಲಿ ಪಡೆಯುತ್ತಿದ್ದ ಮೂಲ ವೇತನ ಮತ್ತು ಇತರೆ ಭತ್ಯೆಗಳು ಈ ಕೆಳಕಂಡಂತೆ ಇರುತ್ತವೆಂದು ವರದಿಸಲಾಗಿದೆ.

| ಕ್ರಮ ಸಂಖ್ಯೆ | ವಿವರ | ಪಡೆದಿರುವ ವೇತನ ಮತ್ತು ಇತರ ಭತ್ಯೆಗಳ ಮೊತ್ತದ ವಿವರ |
|---|---|---|
| 1. | ನಿವೃತ್ತಿ ಕೊನೆಗೆ ಪಡೆದ ಮೂಲ ವೇತನ | 65,830.00 |
| 2. | ತುಟಿ ಭತ್ಯೆಗಳು (DA) | 23,041.00 |
| 3. | ಮನೆ ಬಾಡಿಗೆ ಭತ್ಯೆ(HRA) | 7,326.00 |
| 4. | ನಗರ ಪರಿಹಾರ ಭತ್ಯೆ(CCA) | 300.00 |
| 5. | ವೈದ್ಯಕೀಯ ಭತ್ಯೆ (MA) | 100.00 |
| 6. | ವೆಚ್ಚದ ಭತ್ಯೆ (SA) | 1,000.00 |
| 7. | ಎಸ್.ಎಫ್.ಎನ್ (SFN) | 100.00 |
| **ಒಟ್ಟು** | | **97,697.00** |

**02:–** ದಿನಾಂಕ: 21.12.2013ರ ಕಛೇರಿ ಆದೇಶದ ಅನ್ವಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಾನೂನು ಕೋಶದ ಮುಖ್ಯಸ್ಥರ ಹುದ್ದೆಗೆ 1 ವರ್ಷದ ಅವಧಿಗೆ ಅಥವಾ ಮುಂದಿನ ಆದೇಶದವರೆಗೂ, ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೂ ಕಾನೂನು ಕೋಶದ ಮುಖ್ಯಸ್ಥರನ್ನಾಗಿ ನೇಮಕಾತಿಗೊಳಿಸಿರಲಾಗಿರುತ್ತದೆ. ಕಾನೂನು ಕೋಶದ ಮುಖ್ಯಸ್ಥರಾಗಿ 1 ವರ್ಷದ ಸೇವಾ ಅವಧಿಯು 20–12–2014ಕ್ಕೆ ಮುಕ್ತಾಯಗೊಳ್ಳಲಿರುವುದರಿಂದ, ಸದರಿ ಕಾನೂನು ಕೋಶದ ಮುಖ್ಯಸ್ಥರ ತೃಪ್ತಿಕರವಾದ ಸೇವಾ ಅವಧಿಯನ್ನು ಪರಿಗಣಿಸಿ ಮತ್ತು ಪಾಲಿಕೆಯ ಕಾನೂನು ಕೋಶದ ಕೆಲಸಕಾರ್ಯಗಳ ಹಿತದೃಷ್ಟಿಯಿಂದ, ಸದರಿಯವರ ಸೇವೆಯನ್ನು ದಿನಾಂಕ: 21–12–2014 ಮತ್ತು 21–12–2015 ರಿಂದ ಮತ್ತೊಂದು ವರ್ಷದ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೂ ಎಂದು ಆದೇಶದಲ್ಲಿ ಸೇವೆಯನ್ನು ಮುಂದುವರೆಸಲಾಗಿರುತ್ತದೆ.

**03:–** ದಿನಾಂಕ: 20.12.2016ರ ಆದೇಶದನ್ವಯ ದಿನಾಂಕ: 22–12–2016ರಿಂದ ಅನ್ವಯಿಸುವಂತೆ ಮುಂದಿನ ಆದೇಶವರೆವಿಗೂ ಸೇವೆಯನ್ನು ಮುಂದುವರೆಸಿ ಎಂದು ಆದೇಶಿಸಲಾಗಿದೆ.

**04:–** ಕೆ.ಸಿ.ಎಸ್.ಆರ್. ನಿಯಮ 313ರನ್ವಯ ಮರು ನೇಮಕಾತಿಯ ತರುವಾಯ, ಯಾವ ರೀತಿ ನೇಮಕಾತಿ ವೇತನವನ್ನು ನಿಗಧಿಪಡಿಸಬೇಕು ಎಂಬುದರ ಬಗ್ಗೆ ಸೂತ್ರ ಹೇಳಲಾಗಿದೆ. ಅದು ಎಂದರೆ:–

Last pay –(Pension + PEG) viz.,
Rs.65830-(Rs.32915 + 8495) = 24420.00

**05:–** ಮೇಲ್ಕಂಡ ಸೂತ್ರದನ್ವಯ, ಕಛೇರಿ ಆದೇಶ ಸಂಖ್ಯೆ:ಬಿ12(3ಎ)/ಪಿಆರ್/310/2004–05/2014–15, ದಿನಾಂಕ: 28–05–2014ರನ್ವಯ ನೇಮಕಾತಿ ವೇತನವನ್ನು ಈ ಕೆಳಗಿನಂತೆ ನಿಗಧಿಪಡಿಸಲಾಗಿದೆ.

ಡಿ.ಸಿ.ಆರ್.ಜಿ.
ಪರಿವರ್ತನ ಮೌಲ್ಯ X 12
ರೂ.10,00,000 = 10,00,000= ರೂ.8495.00
9.81 X 12 17.72
ನಿವೃತ್ತಿ ವೇತನ + ಪಿ.ಇ.ಜಿ.
ರೂ.32915 + 8495 + ರೂ.40410/–
ಅಂತಿಮ ವೇತನ –(ನಿವೃತ್ತಿ ವೇತನ + ಪಿ.ಇ.ಜಿ) = ಮರು ನೇಮಕಾತಿ ವೇತನ
ರೂ.65830–41410 = ರೂ.24420.00

**06:–** ಶ್ರೀ.ಕೆ.ಡಿ.ದೇಶಪಾಂಡೆ ಕಾನೂನು ಕೋಶದ ಮುಖ್ಯಸ್ಥರವರಿಗೆ ದಿನಾಂಕ: 28.05.2014ರ ಆದೇಶದ ಅನ್ವಯ ಮರು ನೇಮಕಾತಿ ವೇತನವನ್ನು ನಿಗಧಿಪಡಿಸಿರುವ ಮೊತ್ತಕ್ಕೆ ಸದರಿಯವರ ಯಾವುದೇ ಆಕ್ಷೇಪಣೆಗಳು ಇರುವುದಿಲ್ಲ.

**07:–** ಕರ್ನಾಟಕ ಸಿವಿಲ್ ಸೇವಾ ನಿಯಮಾವಳಿಗಳ ನಿಯಮ 313ರ 5(ಬಿಬಿ) ಕೆಳಗಿರುವ ಟಿಪ್ಪಣಿ ಮತ್ತು ಸರ್ಕಾರದ ಆದೇಶ ಸಂಖ್ಯೆ:ಜಿಓ ನಂ:ಎಫ್‌ಡಿ 57 ಎಸ್‌ಆರ್‌ಎಸ್ 67, ದಿನಾಂಕ: 05–05–1967ರಲ್ಲಿ ಕೆಲವು ಸೂಚನೆಗಳನ್ನು ನೀಡಲಾಗಿರುತ್ತದೆ. ಅದು ಎಂದರೆ:–

*"It is the intension of the Government that the Dearness allowance at the rates admissible from time to time to regular regular Government servants may be allowed also to officers re-employed on contract basis. Government therefore, direct that in all such cases whether or not the terms of contract specifically provide for the payment of Dearness and*

*other Compensatory Allowance, the same may be allowed or the rates sanctioned to Government servants from time to time to the contract officers in addition to the pay fixed in the terms of contract".*

**08:–** ಕರ್ನಾಟಕ ನ್ಯಾಯಾಂಗ ಇಲಾಖೆಯ ನ್ಯಾಯಾಧೀಶರಿಗೆ ರಾಷ್ಟ್ರೀಯ ಪ್ರಥಮ ನ್ಯಾಯಾಧೀಶರ ವೇತನ ಸಮಿತಿ (FNJPC) ಮತ್ತು ಪದ್ಮನಾಭ ಕಮೀಟಿಯ ವರದಿಯ ಪ್ರಕಾರ ಕಾಲ ಕಾಲಕ್ಕೆ ಕೇಂದ್ರ ಸರ್ಕಾರವು ನಿಗಧಿ ಪಡಿಸುವ ತುಟ್ಟಿಭತ್ಯೆ ದರಗಳನ್ನು ಅನ್ವಯಿಸಿಕೊಳ್ಳಲಾಗುತ್ತದೆ. ಆದರೆ ರಾಜ್ಯ ಸರ್ಕಾರವು ನಿಗಧಿ ಪಡಿಸುವ ತುಟ್ಟಿಭತ್ಯೆ ದರಗಳು ನಿವೃತ್ತ ಮತ್ತು ಹಾಲಿ ನ್ಯಾಯಾಧೀಶರಿಗೆ ಅನ್ವಯ ಆಗುವುದಿಲ್ಲ.

**09:–** ಕರ್ನಾಟಕ ರಾಜ್ಯ ಸರ್ಕಾರವು ಕಾಲ ಕಾಲಕ್ಕೆ FNJPC ವರದಿ ಪ್ರಕಾರ ನ್ಯಾಯಾಧೀಶರಿಗೆ ಈ ಕೆಳಕಂಡಂತೆ ತುಟ್ಟಿಭತ್ಯೆಯನ್ನು ನಿಗಧಿಪಡಿಸಿರುತ್ತದೆ. ದಿನಾಂಕ: 10–10–2013ರ ಕರ್ನಾಟಕ ರಾಜ್ಯ ಸರ್ಕಾರ ಆದೇಶದಲ್ಲಿ ಮೂಲ ವೇತನದ ಶೇ.90ರಷ್ಟು ತುಟ್ಟಿಭತ್ಯೆಯನ್ನು ನಿಗಧಿಪಡಿಸಲಾಗಿರುತ್ತದೆ. ಇದೇ ರೀತಿಯಾಗಿ ಮುಂದುವರೆದು ದಿನಾಂಕ: 01–01–2014 ರಿಂದ ಶೇ.100ರಷ್ಟು, ದಿನಾಂಕ:01–07–2014 ರಿಂದ ಶೇ.107ರಷ್ಟು, ದಿನಾಂಕ:01–01–2015ರಿಂದ ಶೇ.113% ರಷ್ಟು, ದಿನಾಂಕ: 01–07–2015ರಿಂದ ಶೇ.119ರಷ್ಟು, ದಿನಾಂಕ: 01–01–2016ರಿಂದ ಶೇ.125ರಷ್ಟು ಮತ್ತು ದಿನಾಂಕ: 01–07–2016ರಿಂದ ಶೇ.132ರಷ್ಟು ತುಟ್ಟಿಭತ್ಯೆಗಳನ್ನು ನಿಗಧಿ ಪಡಿಸಲಾಗಿರುತ್ತದೆ.

**10:–** ತುಟ್ಟಿಭತ್ಯೆಗಳಿಗೆ ಸಂಬಂಧಪಟ್ಟಂತೆ ಕರ್ನಾಟಕ ಆರ್ಥಿಕ ಸಂಹಿತೆ 139ರ ಅನುಚ್ಛೇಧದ ಪ್ರಕಾರ ಜೀವನ ವೆಚ್ಚದಲ್ಲಿಯ ಹೆಚ್ಚಳದ ನಿಮಿತ್ತ ಸರ್ಕಾರಿ ನೌಕರರಿಗೆ ತುಟ್ಟಿಭತ್ಯೆ ಮಂಜೂರು ಮಾಡುವ ಸಂಬಂಧದ ನಿಯಮಗಳನ್ನು ಪರಿಶಿಷ್ಟ 4ರಲ್ಲಿ ವಿವರಿಸಲಾಗಿರುತ್ತದೆ.

**11:–** ಕರ್ನಾಟಕ ಅರ್ಥಿಕ ಸಂಹಿತೆ ಸಂಪುಟ–2, ಅಪೆಂಡೆಕ್ಸ್ – 6ರ ಸೆಕ್ಷನ್–IIರ ನಿಯಮ 7ರಲ್ಲಿ ಈ ಕೆಳಗಿನಂತೆ ಹೇಳಲಾಗಿತ್ತು.

*"In case of pensioners re-employed basis pay means the pay drawn by them on re-employment(excluding special pay, if any) plus pension. Such employees are not entitled to draw Dearness Allowances, if any, with their pension, during the period of re-employment".*

ಈ ನಿಯಮ ಚಾಲ್ತಿಯಲ್ಲಿರುವವರೆಗೆ, ಪುನರ್ ನೇಮಕವಾದ ಅಧಿಕಾರಿಯವರಿಗೆ ನಿವೃತ್ತಿ ತುಟ್ಟಿಭತ್ಯೆಯನ್ನು ಪಡೆಯಲು ಅರ್ಹತೆ ಇರಲಿಲ್ಲ. ಒಂದು ವೇಳೆ ನಿವೃತ್ತಿ ತುಟ್ಟಿಭತ್ಯೆಯನ್ನು ಪಡೆದುಕೊಂಡಿದ್ದಲ್ಲಿ, ಅದನ್ನು ಹಿಂದಿರುಗಿಸಬೇಕಾಗುತ್ತಿತ್ತು. ಈಗ ಅಪೆಂಡಿಕ್ಸ್–VI , ಪೂರ್ತಿಯಾಗಿ ಅಳಸಿ ಹಾಕಲಾಗಿದೆ. ಆದ್ದರಿಂದ ಪುನರ್ ನೇಮಕವಾದ ನಂತರವೂ ಸಹ ನಿವೃತ್ತಿ ವೇತನದೊಂದಿಗೆ ತುಟ್ಟಿಭತ್ಯೆಯನ್ನು ಪಡೆಯಲು ಅರ್ಹತೆಯನ್ನು ಹೊಂದಿರುತ್ತಾರೆ.

**12:–** ಆದ ಮೇರೆಗೆ, ಮೇಲ್ಕಂಡ ವಿಷಯಗಳನ್ನು ಗಮನದಲ್ಲಿರಿಸಿದಾಗ, ಡಿಸೆಂಬರ್–2013 ರಿಂದ ಡಿಸೆಂಬರ್–2016ರವರೆಗೆ ಅಧಿಕಾರಿಯು ಪಡೆಯಬೇಕಾದ ವೇತನ ಮತ್ತು ಭತ್ಯೆಗಳು ಈ ಕೆಳಕಂಡಂತೆ ಇರುತ್ತದೆ.

| SL No. | Month | Basic pay at the time of retirement | Basic pay on reappointment | DA Amount | HRA 30% of the basic pay | CCA | payable |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| 1. | Dec-2013 (2 days) | 65830 | 1575 | 3822 (90% of the basic) | 1274 | 26 | 6697 |
| 2 | Jan -2014 | 65830 | 24420 | 65830 (100% of the Basic) | 19749 | 400 | 110399 |
| 3 | Feb-2014 | 65830 | 24420 | 65830 | 19749 | 400 | 110399 |
| 4 | Mar-2014 | 65830 | 24420 | 65830 | 19749 | 400 | 110399 |
| 5 | Apr-2014 | 65830 | 24420 | 65830 | 19749 | 400 | 110399 |
| 6 | May-2014 | 65830 | 24420 | 65830 | 19749 | 400 | 110399 |
| 7 | Jun-2014 | 65830 | 24420 | 65830 | 19749 | 400 | 110399 |
| 8 | Jul-2014 | 65830 | 24420 | 70438 (107% of the Basic) | 19749 | 400 | 115007 |
| 9 | Aug-2014 | 65830 | 24420 | 70438 (107% of the Basic) | 19749 | 400 | 115007 |
| 10 | Sep-2014 | 65830 | 24420 | 70438 (107% of the Basic) | 19749 | 400 | 115007 |
| 11 | Oct-2014 | 65830 | 24420 | 70438 (107% of the Basic) | 19749 | 400 | 115007 |
| 12 | Nov-2014 | 65830 | 24420 | 70438 (107% of the Basic) | 19749 | 400 | 115007 |
| 13 | Dec-2014 | 65830 | 24420 | 70438 (107% of the Basic) | 19749 | 400 | 115007 |
| 14 | Jan-2015 | 65830 | 24420 | 74388 (113% of the Basic) | 19749 | 400 | 118957 |
| 15 | Feb-2015 | 65830 | 24420 | 74388 (113% of the Basic) | 19749 | 400 | 118957 |
| 16 | Mar-2015 | 65830 | 24420 | 74388 (113% of the Basic) | 19749 | 400 | 118957 |
| 17 | Apr-2015 | 65830 | 24420 | 74388 (113% of the Basic) | 19749 | 400 | 118957 |
| 18 | May-2015 | 65830 | 24420 | 74388 (113% of the Basic) | 19749 | 400 | 118957 |
| 19 | Jun-2015 | 65830 | 24420 | 74388 (113% of the Basic) | 19749 | 400 | 118957 |
| 20 | Jul-2015 | 65830 | 24420 | 78338 (119% of the Basic) | 19749 | 400 | 122907 |
| 21 | Aug-2015 | 65830 | 24420 | 78338 (119% of the Basic) | 19749 | 400 | 122907 |
| 22 | Sep-2015 | 65830 | 24420 | 78338 (119% of the Basic) | 19749 | 400 | 122907 |
| 23 | Oct-2015 | 65830 | 24420 | 78338 (119% of the Basic) | 19749 | 400 | 122907 |
| 24 | Nov-2015 | 65830 | 24420 | 78338 (119% of the Basic) | 19749 | 400 | 122907 |
| 25 | Dec-2015 | 65830 | 24420 | 78338 (119% of the Basic) | 19749 | 400 | 122907 |
| 26 | Jan-2016 | 65830 | 24420 | 82287 (125% of the Basic) | 19749 | 400 | 126856 |
| 27 | Feb-2016 | 65830 | 24420 | 82287 (125% of the Basic) | 19749 | 400 | 126856 |
| 28 | Mar-2016 | 65830 | 24420 | 82287 (125% of the Basic) | 19749 | 400 | 126856 |
| 29 | Apr-2016 | 65830 | 24420 | 82287 (125% of the Basic) | 19749 | 400 | 126856 |
| 30 | May-2016 | 65830 | 24420 | 82287 (125% of the Basic) | 19749 | 400 | 126856 |
| 31 | Jun-2016 | 65830 | 24420 | 82287 (125% of the Basic) | 19749 | 400 | 126856 |
| 32 | Jul-2016 | 65830 | 24420 | 86896 (132% of the Basic) | 19749 | 400 | 131465 |

| | | | | | | | |
|---|---|---|---|---|---|---|---|
| 33 | Aug-2016 | 65830 | 24420 | 86896 (132% of the Basic) | 19749 | 400 | 131465 |
| 34 | Sep-2016 | 65830 | 24420 | 86896 (132% of the Basic) | 19749 | 400 | 131465 |
| 35 | Oct-2016 | 65830 | 24420 | 86896 (132% of the Basic) | 19749 | 400 | 131465 |
| 36 | Nov-2016 | 65830 | 24420 | 86896 (132% of the Basic) | 19749 | 400 | 131465 |
| 37 | Dec-2016 | 65830 | 712238 | 86896 (132% of the Basic) | 19749 | 400 | 131465 |
| **Total** | | | **880695** | **2752884** | **356756** | **14426** | **4360243** |

**12:–** ಮೇಲ್ಕಂಡ ಕೋಷ್ಟಕದಲ್ಲಿ ವಿವರಿಸಿರುವಂತೆ ಮೂಲವೇತನ, ತುಟ್ಟಿ ಭತ್ಯೆ ಮತ್ತು ಇತರೆ ಭತ್ಯೆಗಳನ್ನು ಪಡೆಯಲು ಅರ್ಹರಿರುತ್ತಾರೆ.

**13:–** ಈಗಾಗಲೇ ಪಾಲಿಕೆಯು ಸದರಿ ಅಧಿಕಾರಿಯವರಿಗೆ ರೂ.65830/–ಗಳಂತೆ ಪ್ರತಿ ತಿಂಗಳು ಸಂದಾಯ ಮಾಡಲಾಗಿರುತ್ತದೆ. ಡಿಸೆಂಬರ್ – 2013ರಿಂದ ಡಿಸೆಂಬರ್–2016ರವರೆಗೆ ಒಟ್ಟು ಸಂದಾಯ ಮಾಡಲಾಗಿರುವ ಮೊತ್ತ ರೂ.23,74,174/–ಗಳು. ಸದರಿ ಮೊತ್ತವನ್ನು, ಅಧಿಕಾರಿಯವರಿಗೆ ನೀಡಬೇಕಾಗಿರುವ ಮೊತ್ತ ರೂ.43,60,243/–ಗಳಲ್ಲಿ ಕಟಾವು ಮಾಡಿದ್ದಲ್ಲಿ, ಬಾಕಿ ನಿವ್ವಳ ಮೊತ್ತ ರೂ.19,86,069/–ಗಳನ್ನು ಪಾವತಿ ಮಾಡಬೇಕಾಗಿರುತ್ತದೆ.

**14:–** ಸರ್ಕಾರದ ಪತ್ರ ಸಂಖ್ಯೆ:ನಅಇ 859 ಎಂಎನ್‌ಯು 2015, ದಿನಾಂಕ:05–11–2015ರಲ್ಲಿ ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ಕರ್ನಾಟಕ ನಾಗರಿಕ ಸೇವಾ ನಿಯಮಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಅಳವಡಿಸಿಕೊಂಡಿದ್ದಲ್ಲಿ, ನಿಯಮ 313(3)ರನ್ವಯ ವೇತನ – ಭತ್ಯೆಯನ್ನು ನಿಗಧಿಪಡಿಸಲು ಪಾಲಿಕೆಯ ಹಂತದಲ್ಲೇ ಕ್ರಮವಹಿಸುವಂತೆ ತಿಳಿಸಲಾಗಿರುತ್ತದೆ.

**15:–** ಪ್ರಯುಕ್ತ:–

1. ದಿನಾಂಕ: 30–12–2013ರಿಂದ ದಿನಾಂಕ: 31–12–2016 ರವರೆಗಿನ ಅವಧಿಯ ಲೆಕ್ಕಚಾರದಂತೆ ಅಧಿಕಾರಿಯವರು ಈ ಕೆಳಗಿನಂತೆ ವೇತನ ಪಡೆಯಲು ಅರ್ಹರಾಗಿರುತ್ತಾರೆ. ಅದು ಎಂದರೆ:–

   **ಅ.** ಅಧಿಕಾರಿಯ ಪುನರ್ ನೇಮಕ ವೇತನ ದಿನಾಂಕ:30–12–2013 ರಿಂದ ಪ್ರತಿ ತಿಂಗಳು ರೂ.24,420/–ಗಳಂತೆ, ಒಟ್ಟು ಮೊತ್ತ ರೂ.88,695/–ಗಳನ್ನು;
   **ಆ.** ಕಾಲಕಾಲಕ್ಕೆ ಸರ್ಕಾರವು ನೀಡಲಾಗಿರುವ ಮೂಲ ವೇತನದ ಆಧಾರದ ಮೇಲೆ ನಿವೃತ್ತಿ ನ್ಯಾಯಾಧೀಶರಿಗೆ ನೀಡಲಾಗುವ ತುಟ್ಟಿಭತ್ಯೆ ರೂ.27,52,884/–ಗಳು;
   **ಇ.** ಹೆಚ್‌ಆರ್‌ಎ ಶೇ.30ರಷ್ಟು ರೂ.3,56,756/–ಗಳು;
   **ಈ.** ಸಿಸಿಎ ನಿಯಮಗಳ ಅನ್ವಯ ರೂ.14,426/–ಗಳು;
   **ಉ.** ಬಾಕಿ ಮೊತ್ತವನ್ನು ಸಂದಾಯ ಮಾಡುವಾಗ ಶೇ.10ರಷ್ಟು ಆದಾಯ ತೆರಿಗೆ ಕಟಾವಣೆ;

2. ಈಗಾಗಲೇ ಪಾಲಿಕೆಯು ಸದರಿ ಅಧಿಕಾರಿಯವರಿಗೆ ರೂ.65830/–ಗಳಂತೆ ಪ್ರತಿ ತಿಂಗಳು ಸಂದಾಯ ಮಾಡಲಾಗಿರುತ್ತದೆ. ಡಿಸೆಂಬರ್–2013ರಿಂದ ಡಿಸೆಂಬರ್–2016ರವರೆಗೆ ಒಟ್ಟು ಸಂದಾಯ ಮಾಡಲಾಗಿರುವ ಮೊತ್ತ ರೂ.23,74,174/–ಗಳು. ಸದರಿ ಮೊತ್ತವನ್ನು, ಅಧಿಕಾರಿಯವರಿಗೆ ನೀಡಬೇಕಾಗಿರುವ ಮೊತ್ತ ರೂ.43,60,243/–ಗಳಲ್ಲಿ ಕಟಾವು ಮಾಡಿದ್ದಲ್ಲಿ, ಬಾಕಿ ನಿವ್ವಳ ಮೊತ್ತ ರೂ.19,86,069/–ಗಳನ್ನು ಪಾವತಿ ಮಾಡಬೇಕಾಗಿರುತ್ತದೆ.

3. ಮೇಲ್ಕಂಡ ಬಾಕಿ ಮೊತ್ತವನ್ನು ಸಂದಾಯ ಮಾಡುವಾಗ ಶೇ.10ರಷ್ಟು ಆದಾಯ ತೆರಿಗೆ ಕಟಾವಣೆ ಮಾಡಿ ಬಾಕಿ ಇರುವ ಹಣವನ್ನು ಸಂದಾಯ ಮಾಡಬೇಕಾಗಿರುತ್ತದೆ.

ಈ ಹಿನ್ನಲೆಯಲ್ಲಿ ಶ್ರೀ ಕೆ.ಡಿ.ದೇಶಪಾಂಡೆ, ಕಾನೂನು ಕೋಶದ ಮುಖ್ಯಸ್ಥರವರಿಗೆ ಮೇಲ್ಕಂಡ ಕಂಡಿಕೆ 15(2)ರಂತೆ ಹಣ ಸಂದಾಯ ಮಾಡಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ತೆರಿಗೆ ಮತ್ತು ಅರ್ಥಿಕ ಸ್ಥಾಯಿ ಸಮಿತಿಯ ತೀರ್ಮಾನಕ್ಕಾಗಿ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಆಯುಕ್ತರ ದಿನಾಂಕ: 11.01.2017ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

***16]. ವಿಷಯದ ಸಂಖ್ಯೆ: ತೆಆಸ್ಥಾಸ/124/2016–17***

ಆಯುಕ್ತರ ದಿನಾಂಕ: 13.01.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2016–17ನೇ ಸಾಲಿನ ಆಯವ್ಯಯದಲ್ಲಿ ಘನತ್ಯಾಜ್ಯ ನಿರ್ವಹಣೆಗೆ ಬೇಕಾಗಿರುವ ಹಣದ ಅಂದಾಜು ಪಟ್ಟಿಯನ್ನು ವಿವಿಧ ಲೆಕ್ಕಶೀರ್ಷಿಕೆಯಡಿಯಲ್ಲಿ ತಯಾರಿಸಲಾಗಿರುತ್ತದೆ. ಕೆಲವೊಂದು ಕಾಮಗಾರಿಯ ಲೆಕ್ಕ ಶೀರ್ಷಿಕೆ ಇಲ್ಲದೇ ಇರುವುದರಿಂದ ಮುಖ್ಯಲೆಕ್ಕಾಧಿಕಾರಿಗಳ ಕಛೇರಿಯಲ್ಲಿ ಹೊಸದಾಗಿ ಲೆಕ್ಕಶೀರ್ಷಿಕೆಯನ್ನು ನೀಡಬೇಕಾಗಿರುತ್ತದೆ. 2015–16ನೇ ಸಾಲಿನ ಆಯವ್ಯದಲ್ಲಿ ಘನತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ 2 ಇಲಾಖೆಯಡಿಯಲ್ಲಿ ಆಯವ್ಯಯ ಅಂದಾಜನ್ನು ಕಾಯ್ದಿರಿಸಲಾಗಿರುತ್ತದೆ. ಆದುದರಿಂದ ಆರೋಗ್ಯ ಸಾರ್ವಜನಿಕ ವಲಯ (Public Health Engineering-Zonal) ಮತ್ತು ಕಾಮಗಾರಿ–ಘನತ್ಯಾಜ್ಯ ವಸ್ತುಗಳ ನಿರ್ವಹಣೆ (Enginering Solid Waste Management) ಘನತ್ಯಾಜ್ಯ ನಿರ್ವಹಣೆಯು ಒಂದೇ ಇಲಾಖೆ ಆಗಿರುವುದರಿಂದ ಘನತ್ಯಾಜ್ಯ ನಿರ್ವಹಣೆ (Solid Waste Management) ಎಂದು ಒಂದೇ ಇಲಾಖೆಯ ವತಿಯಿಂದ ವ್ಯವಹರಿಸುವಂತೆ ಪ್ರಸ್ತಾವನೆಯನ್ನು ಮುಖ್ಯ ಲೆಕ್ಕಾಧಿಕಾರಿಗಳಿಗೆ ದಿನಾಂಕ: 04.02.2016 ರಂದು ಸಲ್ಲಿಸಲಾಗಿರುತ್ತದೆ.

ತದನಂತರ ದಿನಾಂಕ:03.03.2016ರಲ್ಲಿ ಅಧ್ಯಕ್ಷರು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ಕೂಡ ಚರ್ಚಿಸಿ 2016–17ನೇ ಸಾಲಿಗೆ ಘನತ್ಯಾಜ್ಯ ನಿರ್ವಹಣೆಗೆ ಬೇಕಾಗಿರುವ ಆಯವ್ಯಯದ ಅಂದಾಜು ಪಟ್ಟಿಯನ್ನು ಸಲ್ಲಿಸಲಾಗಿರುತ್ತದೆ. ಆದರೆ 2016–17ನೇ ಸಾಲಿಗೆ ತಯಾರಿಸಿರುವ ಆಯವ್ಯಯ ಅಂದಾಜುಗಳಲ್ಲಿ ಘನತ್ಯಾಜ್ಯ ನಿರ್ವಹಣೆಗೆ ಕಾಯ್ದಿರಿಸಿರುವ ಮೊತ್ತವು ವ್ಯತ್ಯಾಸವಿರುತ್ತದೆ.

ಮುಖ್ಯವಾಗಿ 2016–17ನೇ ಸಾಲಿನ ಆಯವ್ಯಯದಲ್ಲಿ ಘನತ್ಯಾಜ್ಯ ನಿರ್ವಹಣಾ ಘಟಕಗಳಿಗೆ ನೀಡುವ ಟಿಪ್ಪಿಂಗ್ ಫೀ, ಬಯೋರೆಮಿಡೇಷನ್ ಕಾರ್ಯಕ್ಕೆ, ವಾಹನಗಳ ನಿರ್ವಹಣೆ, ಬಯೋಮಿಥನೇಜೆಷನ್ ಘಟಕಗಳ ನಿರ್ವಹಣೆ ಮತ್ತು ಒಣತ್ಯಾಜ್ಯ ಸಂಗ್ರಹಣಾ ಕೇಂದ್ರಗಳ ರಿಪೇರಿ ಮತ್ತು ನಿರ್ವಹಣೆಗಳು ಇತ್ಯಾದಿಗಳಿಗೆ ಯಾವುದೇ ಮೊತ್ತವನ್ನು ಕಾಯ್ದಿರಿಸಿರುವುದಿಲ್ಲ. ಇದರಿಂದಾಗಿ ದೈನಂದಿನ ಕಾರ್ಯನಿರ್ವಹಣೆಯಲ್ಲಿ ವ್ಯತ್ಯಾಸ ಉಂಟಾಗಿರುತ್ತದೆ. ಕೆಲವೊಂದು ಲೆಕ್ಕಶೀರ್ಷಿಕೆಗಳನ್ನು ಸರ್ಕಾರದಿಂದ ನೀಡುವ ಅನುದಾನದಲ್ಲಿ ಭರಿಸಬಹುದಾಗಿದ್ದು, ಉಳಿದಂತೆ ಕೆಲವು ಲೆಕ್ಕಶೀರ್ಷಿಕೆಗಳಲ್ಲಿ ಮುಖ್ಯವಾಗಿ ಕಾರ್ಯನಿರ್ವಹಣೆ ವೆಚ್ಚವನ್ನು ಸರ್ಕಾರದ ಅನುದಾನದಲ್ಲಿ ಭರಿಸಲು ಬರುವುದಿಲ್ಲವಾದುದರಿಂದ ಈ ಕೆಳಕಂಡ ಮೊತ್ತವನ್ನು ಆಯವ್ಯಯದಲ್ಲಿ ಕಾಯ್ದಿರಿಸಲು ಅವಶ್ಯಕತೆಯಿರುತ್ತದೆ.

| Sl.No | Particulars | Proposed Budget (Rs.in lakhs) for the year 2016-17 | Alloted as per Budge (in Rs.for lakhs) 2016-17 |
|---|---|---|---|
| 1. | O & M for Biomethanization Units | 109.2 | - |
| 2. | Media publication & public awareness, IEC, | 500 | - |
| 3. | Tipping Fees/Transportation to segregation point –P-1521 | 1805 | - |
| 4. | Bio-Remediation at Mandur landfill site | 8843.04 (3000 Required for this year) | - |
| 5. | Cleaning of community Toilets and urinals | 351 | - |
| 6. | Consultancy Charges (DPR Preparation) P-1788 | 100 | 10.00 |
| 7. | Purchase of conservancy articles P-0277 | 500 | 43.77 |
| 8. | Hire charges of SWM vehicles P-2345 | 500 | 5.00 |
| 9. | M & R to Vehicles P-0354/P2176 | 750 | 3.00 |
| 10. | Providing Name boards to black spots and MSW sites. | 25 | - |
| 11. | Operation and Maintenance of Landfill/ Waste Dumping yards/Processing plants P-0968 (New processing sites). | 1450 | - |
| 12. | Establishment of Primary collections centers/ Dry waste Collection Centers/Decentralized. Composting/Biomethanisation plants P-1862 | | - |
| | Pending Bills | | 22.00 |
| | Spillover Works | | 11.00 |
| Total | | 9,331.16 | 94.77 |

ಬಯೋರೆಮಿಡಿಯೇಷನ್ ಕಾರ್ಯಕ್ಕೆ ಈ ಸಾಲಿನಲ್ಲಿ 88.43 ಕೋಟಿ ಬದಲು 30 ಕೋಟಿ ಮೊತ್ತವನ್ನು ಕಾಯ್ದಿರಿಸಿ, ಒಟ್ಟು ರೂ.9,331.16 ಲಕ್ಷಗಳನ್ನು 2016-17ನೇ ಸಾಲಿನ ಲೆಕ್ಕಶೀರ್ಷಿಕೆಗಳಿಗೆ ಪಾಲಿಕೆ ಹಣವನ್ನು ಘನತ್ಯಾಜ್ಯ ನಿರ್ವಹಣೆಗೆ ಕಾಯ್ದಿರಿಸುವಂತೆ ಪ್ರಸ್ತಾವನೆಯನ್ನು ಅನುಮೋದನೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

***-ಮುಂದೂಡಿದೆ-***

## *17]. ವಿಷಯದ ಸಂಖ್ಯೆ: ತೆಆಸ್ಥಾಸ/125/2016-17*

ಆಯುಕ್ತರ ದಿನಾಂಕ: 13.01.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ತೀರ್ಮಾನದಂತೆ, ಆಯುಕ್ತರ ಕಛೇರಿ ಆದೇಶದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ ರೀತಿಯ 283 ಅಧಿಕೃತ ಖಾಯಂ ವಾಹನ ಚಾಲಕರುಗಳಿಗೆ 2015ನೇ ಸಾಲಿನ ಆಯುಧ ಪೂಜಾ ದಿನದಂದು ವಾಹನಗಳ ಪೂಜೆಗಾಗಿ ಪೂಜಾ ಸಾಮಾಗ್ರಿಗಳ ವೆಚ್ಚಕ್ಕಾಗಿ ಹಾಗೂ ವಾಹನಗಳ ಶುದ್ಧಿಕರಣಕ್ಕಾಗಿ ರೂ.500.00 ಗಳ ಮೊತ್ತವನ್ನು ಸಾಮಾನ್ಯ ವೆಚ್ಚದಲ್ಲಿ ಮಂಜೂರು ಮಾಡಲಾಗಿರುತ್ತದೆ.

ಜಂಟಿ ಕಾರ್ಯದರ್ಶಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಚಾಲಕರು, ಶುಚಿಗಾರರು ಮತ್ತು ದುರಸ್ಥಿಗಾರರ ಸಂಘ ರವರು ದಿನಾಂಕ: 19.09.2016ರಂದು ಮನವಿ ಸಲ್ಲಿಸಿ, ವಾಹನವನ್ನು ಶುದ್ಧೀಕರಣ ಮಾಡಲು ಹಾಗೂ ಪೂಜಾ ಸಾಮಾಗ್ರಿಗಳ ವೆಚ್ಚಕ್ಕಾಗಿ ಕನಿಷ್ಟ ರೂ. 1000-00 ಗಳಿಂದ ರೂ. 1500-00 ಗಳವರೆಗೆ ತಗಲುವುದರಿಂದ ಆಯುಧ ಪೂಜಾ ಸಾಮಾಗ್ರಿಗಳ ವೆಚ್ಚಕ್ಕಾಗಿ ಹಾಗೂ ವಾಹನ ಶುದ್ಧೀಕರಣಕ್ಕಾಗಿ ನೀಡಲಾಗುತ್ತಿರುವ ಮೊತ್ತ ರೂ. 500-00 ಗಳನ್ನು ರೂ. 1500-00 ಗಳವರೆಗೆ ಹೆಚ್ಚಿಸಬೇಕೆಂದು ಕೋರಿರುತ್ತಾರೆ.

ಈ ಮೇರೆಗೆ ಮುಖ್ಯ ಲೆಕ್ಕಾಧಿಕಾರಿಗಳ ಅಭಿಪ್ರಾಯ ವರದಿಯನ್ನು ಕೋರಲಾದಂತೆ, ಮುಖ್ಯ ಲೆಕ್ಕಾಧಿಕಾರಿಗಳು ದಿನಾಂಕ: 02.12.2016 ರಂದು ನೀಡಿರುವ ಅಭಿಪ್ರಾಯ ವರದಿಯಲ್ಲಿ ಈ ಕೆಳಕಂಡಂತೆ ತಿಳಿಸಿರುತ್ತಾರೆ.

1. ಪಾಲಿಕೆಯ ಎಲ್ಲಾ ವಾಹನಗಳಿಗೆ ಅಯುಧ ಪೂಜಾ ಸಾಮಾಗ್ರಿಗಳ ವೆಚ್ಚ 2015-16ನೇ ಸಾಲಿನಲ್ಲಿ ಇದ್ದಂತೆ ರೂ.500-00 ರಂತೆ ಒಟ್ಟು 283 ವಾಹನಗಳಿಗೆ ರೂ. 1,45,000-00 ಪಾವತಿಸಲಾಗಿರುತ್ತದೆ. (ದಿನಾಂಕ: 18.11.2015ರ ಆದೇಶದಂತೆ-ಮಾನ್ಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಿರ್ಣಯದಂತೆ) {2016-17ನೇ ಸಾಲಿನಲ್ಲಿ ಒಂದು ವಾಹನಕ್ಕೆ ರೂ.1,500-00 ಗಳಂತೆ {ಆಯುಧ ಪೂಜಾ ಸಾಮಾಗ್ರಿಗಳ ವೆಚ್ಚ + ವಾಹನ ಶುದ್ದೀಕರಣ ವೆಚ್ಚ} ಒಟ್ಟು 283 ವಾಹನಗಳಿಗೆ ರೂ. 4,24,500/- ಗಳಾಗುತ್ತದೆ.}
2. ಪ್ರಸ್ತುತ 2016-17ನೇ ಸಾಲಿನ ಸದರಿ ಮೊತ್ತವನ್ನು ರೂ. 500-00 ರಿಂದ ರೂ. 1500-00ಕ್ಕೆ ಹೆಚ್ಚಿಸಲು ಸಂಘವು ಕೋರಿದ್ದು, ಅಂತಿಮ ನಿರ್ಣಯಕ್ಕೆ ತೆರಿಗೆ & ಆರ್ಥಿಕ ಸ್ಥಾಯಿ ಸಮಿತಿಗೆ ಟಿಪ್ಪಣಿ ಸಲ್ಲಿಸುವುದೆಂದು ಅಭಿಪ್ರಾಯಿಸಿರುತ್ತಾರೆ.

ಆದ್ದರಿಂದ 2016-17ನೇ ಸಾಲಿನಲ್ಲಿ ಆಯುಧ ಪೂಜಾ ಸಾಮಾಗ್ರಿಗಳ ವೆಚ್ಚಕ್ಕಾಗಿ ಹಾಗೂ ವಾಹನ ಶುದ್ಧೀಕರಣಕ್ಕಾಗಿ ನೀಡಲಾಗುತ್ತಿರುವ ಮೊತ್ತ ರೂ. 500-00 ಗಳಿಂದ ರೂ. 1,500-00 ಗಳವರೆಗೆ ಹೆಚ್ಚಿಸುವ ಸಂಬಂಧ ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಆಯುಕ್ತರ ದಿನಾಂಕ: 11.01.2017ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

***18]. ವಿಷಯದ ಸಂಖ್ಯೆ: ತೆಆಸ್ಥಾಸ/126/2016-17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 20.01.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, Filling of Pot Holes in Ward No.91 ಕಾಮಗಾರಿಗೆ 214-15ರ ಆಯವ್ಯಯದ ಲೆಕ್ಕಶೀರ್ಷಿಕೆ ವಾರ್ಡ್ ಅನುದಾನದ ಕಾಮಗಾರಿಗಳು ಪಿ-1771 ಅಡಿ ರೂ.10.00 ಲಕ್ಷಗಳಿಗೆ 09-15-000011 ಜಾಬ್ ಸಂಖ್ಯೆ ನೀಡಲಾಗಿದೆ. ಕಾಮಗಾರಿಯನ್ನು 2015-16ನೇ ಸಾಲಿನಲ್ಲಿ Freeze ಮಾಡಲಾಗಿದೆ. ಕಾಮಗಾರಿಯನ್ನು ಈಗಾಗಲೇ ಪೂರ್ಣಗೊಳಿಸಿದ್ದು, ಬಿ.ಆರ್.109/2105-16, ದಿನಾಂಕ: 30.09.2015 ರಲ್ಲಿ ದಾಖಲಾಗಿಸಿದ್ದು, defreeze ಮಾಡಲು ಮುಖ್ಯ ಅಭಿಯಂತರರು ಪ್ರಸ್ತಾವನೆ ಸಲ್ಲಿಸಿರುತ್ತಾರೆ. 2016-17ರ ಆಯವ್ಯಯದ ಲೆಕ್ಕಶೀರ್ಷಿಕೆ ಪಿ1771ನ Spillover Works / Pending Bills ಗಳ ಅಡಿ ಅನುದಾನ ಲಭ್ಯವಿರುವುದಿಲ್ಲವೆಂದು ಮುಖ್ಯ ಲೆಕ್ಕಾಧಿಕಾರಿಗಳು ವರದಿಸಿರುತ್ತಾರೆ. ವಾರ್ಡ್ ಸಂಖ್ಯೆ 62ರ ಪಾಲಿಕೆ ಸದಸ್ಯರು defreeze ಮಾಡಲು 2016-17ರ ಪರಿಷ್ಕೃತ ಆಯವ್ಯಯದಲ್ಲಿ ಅನುದಾನ ಒದಗಿಸಿಕೊಳ್ಳಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲು ಕೋರಿರುತ್ತಾರೆ. 2016-17ರ ಪರಿಷ್ಕೃತ ಆಯವಯ್ಯದಲ್ಲಿ ಪಿ1771ರ Spillover Works ಅಡಿ ರೂ.10.00 ಲಕ್ಷಗಳ ಅನುದಾನವನ್ನು ಅಳವಡಿಸಿಕೊಂಡು 091-15-000011ರ ಜಾಬ್ ಸಂಖ್ಯೆಯನ್ನು defreeze ಗೊಳಿಸಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 20.01.2017ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

***19]. ವಿಷಯದ ಸಂಖ್ಯೆ: ತೆಆಸ್ಥಾಸ/127/2016-17***

ಆಯುಕ್ತರ ದಿನಾಂಕ: 12-01-2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಶ್ರೀ. ಟಿ. ಮಾಯಣ್ಣ (ಟಿ. ಮಾದಯ್ಯ ರವರ ಜಿ.ಪಿ.ಎ. ದಾರರು) ನಂ: 36, 7ನೇ ಮುಖ್ಯರಸ್ತೆ, ಬಿ.ಡಿ.ಎ ಪಾರ್ಕ್ ಎದುರು, ಆವಲಹಳ್ಳಿ, ಬೆಂಗಳೂರು ಇವರು ಅರ್ಜಿ ಸಲ್ಲಿಸಿ, ಬೆಂಗಳೂರು ಉತ್ತರ ತಾಲ್ಲೂಕು, ಸಾಣೆಗೊರವನ ಹಳ್ಳಿ ಗ್ರಾಮದ ಸರ್ವೆ ನಂ: 46ರಲ್ಲಿ 30x40 ಅಡಿ ಅಳತೆಯ ನಿವೇಶನವನ್ನು ದಿನಾಂಕ: 02.11.1977 ರಲ್ಲಿ ಬೆಂಗಳೂರು ಉತ್ತರ ತಾಲ್ಲೂಕಿನ ತಹಸೀಲ್ದಾರ್ ರವರು ಹಂಚಿಕೆ ಮಾಡಿ ಹಕ್ಕು ಪತ್ರ ನೀಡಿರುತ್ತಾರೆ. ಸದರಿ ನಿವೇಶನದಲ್ಲಿ ಬೆಂಗಳೂರು ನಗರ ಪಾಲಿಕೆಯು ಅನಧಿಕೃತವಾಗಿ ಮಳೆ ನೀರಿನ ಚರಂಡಿಯನ್ನು ನಿರ್ಮಿಸಿದ್ದು, ಪಾಲಿಕೆ ವಿರುದ್ಧ ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಸಂಖ್ಯೆ: 9154/2003 ರಂತೆ ದಾವೆಯನ್ನು ಹೂಡಿದ್ದು, ಸದರಿ ದಾವೆಗೆ ಸಂಬಂಧಿಸಿದಂತೆ ನ್ಯಾಯಾಲಯವು ದಿನಾಂಕ: 04.06.2008 ರಂದು ತೀರ್ಪು ನೀಡಿ, ಅರ್ಜಿದಾರರ ನಿವೇಶನದಲ್ಲಿ ನಿರ್ಮಾಣ ಮಾಡಿರುವ ಮಳೆ ನೀರಿನ ಚರಂಡಿಯನ್ನು ತೆರವುಗೊಳಿಸುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ನಿರ್ಬಂಧಕಾಜ್ಞೆ ಮುಖೇನ ನಿರ್ದೇಶಿಸಿದೆ. ಆದುದರಿಂದ, ಅನಧಿಕೃತವಾಗಿ ನಿರ್ಮಿಸಿರುವ ಮಳೆ ನೀರಿನ ಚರಂಡಿಯನ್ನು ತೆರವುಗೊಳಿಸಲು ಸಾಧ್ಯವಾಗದಿದ್ದರೆ, ತಮಗೆ ಪರ್ಯಾಯ ನಿವೇಶನವನ್ನು ನೀಡಬೇಕೆಂದು ಕೋರಿರುತ್ತಾರೆ.

ಶ್ರೀ. ಟಿ. ಮಾಯಣ್ಣರವರು ಬೃಹತ್ ಬೆಂಗಳೂರ ಮಹಾನಗರ ಪಾಲಿಕೆ ವಿರುದ್ಧ ದಾವೆ ಸಂಖ್ಯೆ: 9154/2003 ಅನ್ನು 9ನೇ ಅಧಿಕ ನಗರ ವ್ಯವಹಾರಿಕ ಮತ್ತು ಸತ್ರ ನ್ಯಾಯಾಲಯದಲ್ಲಿ ಹೂಡಿದ್ದು, ಸದರಿ ದಾವೆಯಲ್ಲಿ ಪಾಲಿಕೆಯ ವಿರುದ್ಧ ಡಿಕ್ರಿಯಾಗಿರುತ್ತದೆ. ಸದರಿ ಆದೇಶದ ವಿರುದ್ಧ ಬಿಬಿಎಂಪಿಯು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಿದ RFA 1133/2008 ನ್ನು ದಿನಾಂಕ: 29.01.2013 ರಂದು ಮಾನ್ಯ ಉಚ್ಚ ನ್ಯಾಯಾಲಯವು ವಜಾಗೊಳಿಸಿರುತ್ತದೆ. ಹಾಗೂ ಸದರಿ ತೀರ್ಪಿನ ವಿರುದ್ಧ ಪಾಲಿಕೆಯು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ SLP ಸಂಖ್ಯೆ: 22011/2013 ಅನ್ನು ದಾಖಲಿಸಿದ್ದು, ಈ ದಾವೆಯೂ ಸಹ ವಜಾಗೊಂಡಿರುತ್ತದೆ.

ಮುಂದುವರೆದು, ಶ್ರೀ. ಟಿ. ಮಾಯಣ್ಣ ರವರು 9ನೇ ಅಪರ ಸಿವಿಲ್ ಮತ್ತು ಸತ್ರ ನ್ಯಾಯಾಲಯದಲ್ಲಿ ಪಾಲಿಕೆಯ ವಿರುದ್ಧ Executive Petition No: 3213/2013 ದಾಖಲಿಸಿದ್ದು, ಸದರಿ ದಾವೆಯ ತೀರ್ಪಿನಲ್ಲಿ ನ್ಯಾಯಾಲಯವು ಪ್ರಕರಣ ಸಂಖ್ಯೆ: 9154/2003 ರಂತೆ ಪಾಲಿಕೆಯು ಪರಿಹಾರ ನೀಡುವಂತೆ ದಿನಾಂಕ: 06.12.2014 ರಲ್ಲಿ ಮತ್ತೆ ಆದೇಶಿಸಿದೆ.

ಸದರಿ ನಿವೇಶನಕ್ಕೆ ಸಂಬಂಧಿಸಿದಂತೆ ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರವರಿಂದ ವರದಿ ಪಡೆಯಲಾಗಿದ್ದು, ಸಹಾಯಕ ಕಾರ್ಯಪಾಲಕ ಅಭಿಯಂತರರು ಈ ಮುಂದಿನಂತೆ ವರದಿ ನೀಡಿರುತ್ತಾರೆ. ಸಾಣೆಗೊರವನಹಳ್ಳಿ ಗ್ರಾಮದ ಸರ್ವೆ ನಂ: 46 ರಲ್ಲಿನ 947ನೇ ನಂಬರಿನ ನಿವೇಶನದಲ್ಲಿ ಮಳೆ ನೀರಿನ ಚರಂಡಿ ಅಕ್ಕಪಕ್ಕದಲ್ಲಿ ಉಳಿದಿರುವ ನಿವೇಶನದ ಭಾಗದಲ್ಲಿ ಯಾವುದೇ ಕಟ್ಟಡ ನಿರ್ಮಿಸಲು ಸಾಧ್ಯವಿರುವುದಿಲ್ಲ ಹಾಗೂ ಮಳೆ ನೀರಿನ ಚರಂಡಿಯನ್ನು (Secondary Storm Water Drain) ಸ್ಥಳಾಂತರಿಸಲೂ ಸಹ ಅವಕಾಶವಿರುವುದಿಲ್ಲ. ಆದ್ದರಿಂದ, ಸ್ವತ್ತಿನ ಮಾಲೀಕರಿಗೆ ಪಾಲಿಕೆಯಲ್ಲಿ ನಿವೇಶನ ಖಾಲಿ ಇದ್ದಲ್ಲಿ ಬದಲಿ ನಿವೇಶನ ನೀಡುವ ಬಗ್ಗೆ ಅಥವಾ ನಗದು ರೂಪದಲ್ಲಿ ಪರಿಹಾರ ನೀಡುವ ಬಗ್ಗೆ ಮುಂದಿನ ಕ್ರಮವಹಿಸಬಹುದು ಎಂದು ವರದಿ ಮಾಡಿರುತ್ತಾರೆ.

ಭೂಮಾಲೀಕರಿಗೆ ಭೂಪರಿಹಾರವನ್ನು ಪಾವತಿಸಲು ಕೆ.ಎಂ.ಸಿ. ಕಾಯ್ದೆ-175 ಹಾಗೂ 270 ಅಡಿಯಲ್ಲಿ ಪರಸ್ಪರ ಒಪ್ಪಂದದ ಮೇಲೆ ದರ ಸಂಧಾನ ಏರ್ಪಡಿಸಿ, ಮೌಲ್ಯ ನಿಗಧಿ ಪಡಿಸಿಕೊಂಡು ಪರಿಹಾರ ನೀಡಲು ಅಗತ್ಯ ಕ್ರಮಕೈಗೊಳ್ಳುವಂತೆ ಜಂಟಿ ಆಯುಕ್ತರು(ಪಶ್ಚಿಮ) ರವರಿಗೆ ಆಯುಕ್ತರು ಆದೇಶಿಸಿರುವ

ಹಿನ್ನೆಲೆಯಲ್ಲಿ, ಜಂಟಿ ಆಯುಕ್ತರು(ಪಶ್ಚಿಮ) ರವರು ಕೆ.ಎಂ.ಸಿ. ಕಾಯ್ದೆ 1976 ರ ಸೆಕ್ಷನ್ 175 ರಂತೆ ಪರಸ್ಪರ ಒಪ್ಪಂದದ ಮೇರೆಗೆ ಖಾಸಗಿ ಸ್ವತ್ತನ್ನು ನೇರವಾಗಿ ಖರೀದಿಸಲು ದರ ನಿಗಧಿಪಡಿಸಲು ರಚಿಸಿರುವ ಪಾಲಿಕೆಯ ಕೇಂದ್ರ ಕಚೇರಿಯ ದರ ಸಂಧಾನ ಸಮಿತಿಯ ಸಭೆ ಮುಂದೆ ಮಂಡಿಸಲಾಯಿತು. ಸದರಿ ಸಮಿತಿಯಲ್ಲಿ ಪ್ರಸ್ತಾವನೆಯ ಕುರಿತು ಕೂಲಂಕಷ'ವಾಗಿ ಚರ್ಚಿಸಿ ಈ ಮುಂದಿನಂತೆ ನಿರ್ಣಯಿಸಲಾಗಿದೆ. "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಬೆಂಗಳೂರು ಉತ್ತರ ತಾಲ್ಲೂಕು, ಸಾಣೆಗೊರವನ ಹಳ್ಳಿ ಗ್ರಾಮದ ಸರ್ವೆ ನಂ: 46ರಲ್ಲಿ ಮಳೆ ನೀರು ಕಾಲುವೆಗೆ ಉಪಯೋಗಿಸಿಕೊಂಡಿರುವ ಭೂಮಾಲೀಕರ ಸ್ವತ್ತಿಗೆ ಸರ್ಕಾರದ ಪ್ರಸ್ತುತ ವರ್ಷದ ಮಾರ್ಗಸೂಚಿ ದರದಂತೆ ಚದರ ಅಡಿ ಒಂದಕ್ಕೆ ರೂ. 1,800/– ರಂತೆ ಇದ್ದು, ಬೃಹತ್ ನೀರುಗಾಲುವೆಗೆ ಅವರ ಸ್ವತ್ತಿನಲ್ಲಿ ಉಪಯೋಗಿಸಿರುವ 1200 ಚದರ ಅಡಿ ವಿಸ್ತೀರ್ಣಕ್ಕೆ ಚದರ ಅಡಿ ಒಂದಕ್ಕೆ ರೂ. 1800/– ರಂತೆ ಲೆಕ್ಕಾಚಾರ ಮಾಡಿದಾಗ ಒಟ್ಟು ರೂ. 21,60,000/– ಆಗುತ್ತಿದ್ದು, ಈ ಪರಿಹಾರವನ್ನು ಪಡೆಯಲು ಅರ್ಜಿದಾರರು ಸಭೆಯಲ್ಲಿ ಸಮ್ಮತಿಸಿದ್ದರಿಂದ, ನಗದು ರೂಪದಲ್ಲಿ ಪರಿಹಾರ ನೀಡಲು ನಿರ್ಣಯಿಸಿತು".

<u>ದರ ಸಂಧಾನ ಸಮಿತಿಯ ನಿರ್ಣಯದಂತೆ ಭೂಮಾಲೀಕರಿಗೆ ಕೆ.ಎಂ.ಸಿ ಕಾಯ್ದೆ 1976ರ ಸೆಕ್ಷನ್ 175 ರನ್ವಯ ದರ ಸಂದಾನದ ಮೂಲಕ ದರ ನಿಗಧಿಪಡಿಸಿ ನೀಡಬೇಕಾಗುವ ಪರಿಹಾರದ ತಃಖ್ತೆ:</u>

| | | |
|---|---|---|
| 1 | ಸ್ವತ್ತಿನ ವಿವರ | ಬೆಂಗಳೂರು ಉತ್ತರ ತಾಲ್ಲೂಕು, ಸಾಣೆಗೊರವನ ಹಳ್ಳಿ ಗ್ರಾಮದ ಸರ್ವೆ ನಂ: 46 |
| 2 | ಸ್ವತ್ತಿನ ಖಾತೆದಾರರ ಹೆಸರು | ಶ್ರೀ. ಮಾದಯ್ಯ |
| 3 | ಬೃಹತ್ ನೀರುಗಾಲುವೆ ಕಾಮಗಾರಿಗೆ ಪಡೆದ ವಿಸ್ತೀರ್ಣ | 1200 ಚದರ ಅಡಿ |
| 4 | 2016 ನೇ ಸಾಲಿನ ಮಾರ್ಗಸೂಚಿ ದರ | ಚದರ ಅಡಿ ಒಂದಕ್ಕೆ 1800/– |
| 5 | 1200 ಚದರ ಅಡಿಗೆ | 1800 x 1200 = 21,60,000/– |
| 6 | ಒಟ್ಟು ಪರಿಹಾರ ಮೊತ್ತ | ರೂ. 21,60,000/– |

(ಇಪ್ಪತ್ತೊಂದು ಲಕ್ಷದ ಅರವತ್ತು ಸಾವಿರ ರೂಗಳು ಮಾತ್ರ)

ಮೇಲೆ ವಿವರಿಸಿರುವ ಸ್ವತ್ತನ್ನು ಕೆ.ಎಂ.ಸಿ. ಕಾಯ್ದೆ 1976ರ ಸೆಕ್ಷನ್ 175 ರಂತೆ ಒಟ್ಟು ಮೊತ್ತ ರೂ. 21,60,000/– (ಇಪ್ಪತ್ತೊಂದು ಲಕ್ಷದ ಅರವತ್ತು ಸಾವಿರ ರೂಗಳು ಮಾತ್ರ) ಗಳನ್ನು ಪಾಲಿಕೆಯ 2016–17ನೇ ಸಾಲಿನ ಆಯವ್ಯಯದಲ್ಲಿ, ಭೂಸ್ವಾಧೀನಕ್ಕಾಗಿ ಮೀಸಲಿರಿಸಿರುವ ಅನುದಾನದಿಂದ ಭರಿಸುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ಭೂಪರಿಹಾರದ ತಃಖ್ತೆಯೊಂದಿಗೆ ಮಂಡಿಸಲಾದ ದಿನಾಂಕ: 12–01–2017ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 20–01–2017ರ ಸಭೆಯ ನಿರ್ಣಯ.

**ನಿರ್ಣಯ: ಆಯುಕ್ತರ ದಿನಾಂಕ: 12.01.2017ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

## <u>*20]. ವಿಷಯದ ಸಂಖ್ಯೆ: ತೆಆಸ್ಥಾಸ/128/2016–17*</u>

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 20.01.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪುಲಿಕೇಶಿನಗರ ವಿಭಾಗದ ವಾರ್ಡ್ ವ್ಯಾಪ್ತಿಯ ವಾರ್ಡ್ 47ರಲ್ಲಿ ಪಿ2353 ಅಡಿಯಲ್ಲಿ ಈ ಕೆಳಕಂಡ ಕಾಮಗಾರಿಯನ್ನು ಮಾನ್ಯ ಪಾಲಿಕೆ ಸದಸ್ಯರು ಪತ್ರ ನೀಡಿ ಮಾನ್ಯ ಆಯುಕ್ತರು ರವರನ್ನು ಕೋರಿದ್ದು, ಅದರಂತೆ ಮಾನ್ಯ ಆಯುಕ್ತರು ರವರು ಕಡತದ ಕಂಡಿಕೆ 43ರಲ್ಲಿ Providiing Drain from Modi Garden 6th Cross to Varalakshminagar in ward No.47 ಕಾಮಗಾರಿಯನ್ನು 2013–14ನೇ ಸಾಲಿನ ಆಯವಯ್ಯದ ಲೆಕ್ಕಶೀರ್ಷಿಕೆ ಪ2353

ಅನುದಾನದಡಿಯಲ್ಲಿ ರೂ.25.00 ಲಕ್ಷಗಳಿಗೆ ದಿನಾಂಕ: 18.02.2014 ರಂದು ಕಾಮಗಾರಿ ಸಂಕೇತ 047-14-000070 ಪಡೆದುಕೊಂಡಿದ್ದು, ಸದರಿ ಕಾಮಗಾರಿಯ ಬದಲಾಗಿ ಅದೇ ಮೊತ್ತದಲ್ಲಿ Construction of Drain Surrounding Nelson Mandela Park in ward No.47 DJ Halli ಕಾಮಗಾರಿಯನ್ನು ಕೈಗೊಳ್ಳುವ ಸಂಬಂಧ ಬದಲಿ ಕಾಮಗಾರಿ ಸಂಕೇತ ನೀಡಲು ಕೋರಿರುವ ಮೇರೆಗೆ ಹೊಸ ಕಾಮಗಾರಿ ಸಂಕೇತ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 20.01.2017ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

## *21]. ವಿಷಯದ ಸಂಖ್ಯೆ: ತೆಆಸ್ಥಾಸ/129/2016-17*

ಆಯುಕ್ತರ ದಿನಾಂಕ: 19.01.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಭುವನೇಶ್ವರಿ ಕಲಾ ಸಂಘ (ರಿ) ಬೆಂಗಳೂರು ರವರ ಕೋರಿಕೆಯ ಮೇರೆಗೆ, ಪೂಜ್ಯ ಮಹಾಪೌರರು, ದಿನಾಂಕ: 11.07.2016ರ ಪತ್ರದಲ್ಲಿ ಕ್ಷಯರೋಗದ ಬಗ್ಗೆ ಕಿರು ಚಿತ್ರಗಳ ಮೂಲಕ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮವನ್ನು ಕೈಗೊಳ್ಳುತ್ತಿರುವ ಶ್ರೀ ಭುವನೇಶ್ವರಿ ಕಲಾ ಸಂಘ ಈರಿ0 ರವರಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2016-17ನೇ ಸಾಲಿನ ಪಾಲಿಕೆಯ ಆಯವ್ಯಯದ ಲೆಕ್ಕಶೀರ್ಷಿಕೆ 24 ಸಂಸ್ಕೃತಿ ಮತ್ತು ಕ್ರೀಡೆ, ಪಿ-48 ಕೊಡುಗೆಗಳು ಮತ್ತು ಸಹಾಯಧನ ಅನುಬಂಧ-2ರ ಕ್ರಮಸಂಖ್ಯೆ 21ರಲ್ಲಿ ಭುವನೇಶ್ವರಿ ಕಲಾ ಸಂಘ (ರಿ) ಬೆಂಗಳೂರು ರವರಿಗೆ ಮೀಸಲಿರಿಸಿರುವ ರೂ.2.00 ಲಕ್ಷಗಳ ಸಹಾಯಧನವನ್ನು ಬಿಡುಗಡೆ ಮಾಡುವ ಬಗ್ಗೆ ನಿಯಮಾನುಸಾರ ಕ್ರಮಕೈಗೊಳ್ಳಲು ಆದೇಶಿಸಿರುತ್ತಾರೆ.

ಮುಂದುವರೆದಂತೆ, 2016-17ನೇ ಸಾಲಿನ ಅಯವ್ಯಯದ ಲೆಕ್ಕಶೀರ್ಷಿಕೆ 24 ಸಂಸ್ಕೃತಿ ಮತ್ತು ಕ್ರೀಡೆ, ಪಿ-048 ಕೊಡುಗೆಗಳು ಮತ್ತು ಸಹಾಯಧನ ಅನುಬಂಧ-2ರ ಕ್ರಮಸಂಖ್ಯೆ: 21ರಲ್ಲಿ ಭುವನೇಶ್ವರಿ ಕಲಾ ಸಂಘ (ರಿ), ಬೆಂಗಳೂರು ರವರಿಗೆ ಮೀಸಲಿರಿಸಿರುವ ರೂ.02.00 ಲಕ್ಷಗಳ ಅನುದಾನವನ್ನು ಹಂಚಿಕೆ ಮಾಡಲಾಗಿರುತ್ತದೆ.

ತತ್ಸಂಬಂಧವಾಗಿ ಮೇಲಿನ ಅಂಶಗಳನ್ನು ಸ್ಥಾಯಿ ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಭುವನೇಶ್ವರಿ ಕಲಾ ಸಂಘ (ರಿ), ಬೆಂಗಳೂರು ರವರಿಗೆ ಅನುದಾನ ಮಂಜೂರಾತಿ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: 2016-17ನೇ ಸಾಲಿನ ಆಯವ್ಯಯ ಅನುಬಂಧ-2ರಲ್ಲಿ ಸದರಿ ಸಂಸ್ಥೆಗೆ ಹಂಚಿಕೆ ಮಾಡಲಾಗಿರುವ ರೂ.2.00 (ಎರಡು ಲಕ್ಷ ಮಾತ್ರ) ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡಲು ಸಮಿತಿಯು ಒಪ್ಪಿತು.**

## *22]. ವಿಷಯದ ಸಂಖ್ಯೆ: ತೆಆಸ್ಥಾಸ/130/2016-17*

ಆಯುಕ್ತರ ದಿನಾಂಕ: 18.01.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಶ್ರೀ ರಾಜ್ ಪಾಟೀಲ್, ಅಧ್ಯಕ್ಷರು, 9ನೇ ಅಕ್ಕ ವಿಶ್ವ ಕನ್ನಡ ಸಮ್ಮೇಳನ-2016 ಅಟ್ಲಾಂಟಿಕ್ ಸಿಟಿ ಕನ್ವೆನ್ಷನ್ ಸೆಂಟರ್, ಅಟ್ಲಾಂಟಿಕ್ ಸಿಟಿ ರವರ ಕೋರಿಕೆಯ ಮೇರೆಗೆ, ಸನ್ಮಾನ್ಯ ಶ್ರೀರಾಮಲಿಂಗಾ ರೆಡ್ಡಿ, ಮಾನ್ಯ ಸಾರಿಗೆ ಹಾಗೂ ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಪೂಜ್ಯ ಮಹಾಪೌರರು ತಮ್ಮ ಪತ್ರಗಳಲ್ಲಿ ತಿಳಿಸಿರುವಂತೆ, ಕನ್ನಡ ಕೂಟಾಸ್ ಆಫ್ ಅಮೇರಿಕಾ-ಅಕ್ಕಾ 1998ರಲ್ಲಿ ಸ್ಥಾಪನೆಗೊಂಡು 2 ಲಕ್ಷ ಸದಸ್ಯರನ್ನು ಹೊಂದಿರುವ

ಲಾಭರಹಿತ ಸಂಸ್ಥೆಯಾಗಿದ್ದು, ಅಂತರಾಷ್ಟ್ರೀಯ ಮಟ್ಟದಲ್ಲಿ ಕನ್ನಡ ಭಾಷೆಯ ಪ್ರಚಾರ ಹಾಗೂ ಏಳಿಗೆಗಾಗಿ ಶ್ರಮಿಸುತ್ತಿರುವ ಸದರಿ ಸಂಸ್ಥೆಯು 2016 ಸೆಪ್ಟೆಂಬರ್ 2, 3 ಮತ್ತು 4ರಂದು ಆಯೋಜಿಸಿರುವ ಸಮ್ಮೇಳನಕ್ಕಾಗಿ ಸೂಕ್ತ ಧನಸಹಾಯ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲು ಆದೇಶಿಸಿರುತ್ತಾರೆ.

ಮುಂದುವರೆದಂತೆ, 2016-17ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 24 ಸಂಸ್ಕೃತಿ ಮತ್ತು ಕ್ರೀಡೆ, ಪಿ-048 ಕೊಡುಗೆಗಳು ಮತ್ತು ಸಹಾಯಧನಕ್ಕಾಗಿ ರೂ.500.00 ಲಕ್ಷಗಳನ್ನು ಮೀಸಲಿರಿಸಲಾಗಿರುತ್ತದೆ. ಇದರಂತೆ ಅನುಬಂಧ-2ರಲ್ಲಿ 30 ಸಂಘ/ಸಂಸ್ಥೆಗಳ ಸಹಾಯಧನ ಹಂಚಿಕೆ ಪಟ್ಟಿಯಲ್ಲಿ ಸದರಿ ಸಂಸ್ಥೆಯ ಹೆಸರು ಸೇರ್ಪಡೆಗೊಂಡಿರುವುದಿಲ್ಲ.

ತತ್ಸಂಬಂಧವಾಗಿ ಮೇಲಿನ ಅಂಶಗಳನ್ನು ಸ್ಥಾಯಿ ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, 9ನೇ ಅಕ್ಕ ವಿಶ್ವ ಕನ್ನಡ ಸಮ್ಮೇಳನ-2016 ರವರಿಗೆ ಸಹಾಯಧನ ಮಂಜೂರಾತಿ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

***-ಮುಂದೂಡಿದೆ-***

## ***ಹೆಚ್ಚುವರಿ ವಿಷಯ:-***

***23]. ವಿಷಯದ ಸಂಖ್ಯೆ: ತೆಆಸ್ಥಾಸ/131/2016-17***

ಆಯುಕ್ತರ ದಿನಾಂಕ: 21.01.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಹೆಚ್.ಎಮ್.ಟಿ. ವಾರ್ಡ್ ನಂ.38ರ ವ್ಯಾಪ್ತಿಯ ಪೀಣ್ಯ, 4ನೇ ಬ್ಲಾಕ್, ಹರಿಜನ ಕಾಲೋನಿಯಲ್ಲಿ ಡಾ॥ ಬಿ.ಆರ್.ಅಂಬೇಡ್ಕರ್ ಸಮುದಾಯ ಭವನವನ್ನು ಹೊಸದಾಗಿ ನಿರ್ಮಿಸಲಾಗಿರುತ್ತದೆ. ಸದರಿ ಡಾ॥ ಬಿ.ಆರ್.ಅಂಬೇಡ್ಕರ್ ಸಮುದಾಯ ಭವನವನ್ನು ಸಾರ್ವಜನಿಕರಿಗೆ ಅನುಕೂಲವಾಗುವಂತೆ ಬಾಡಿಗೆ ನಿಗಧಿಗೊಳಿಸಲು ಸ್ಥಳಿಯ ವಾರ್ಡ್-38ರ ಪಾಲಿಕೆ ಸದಸ್ಯರು ಮನವಿ ಮಾಡಿರುತ್ತಾರೆ.

ಮುಂದುವರೆದಂತೆ ಸ್ಥಳಿಯ ಪಾಲಿಕೆ ಸದಸ್ಯರ ಕೋರಿಕೆಯಂತೆ ಡಾ॥ ಬಿ.ಆರ್. ಅಂಬೇಡ್ಕರ್ ಸಮುದಾಯ ಭವನದ ಬಾಡಿಗೆ ನಿಗಧಿಗೊಳಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಮದುವೆ ಸಮಾರಂಭಗಳಿಗಾಗಿ ರೂ.15,000/- (ರೂ.ಹದಿನೈದು ಸಾವಿರ ಮಾತ್ರ) ಮತ್ತು ಇನ್ನಿತರೆ ಚುಟುಕ ಕಾರ್ಯಕ್ರಮಗಳಿಗಾಗಿ ದಿನವೊಂದಕ್ಕೆ ರೂ.8,000/- (ರೂ. ಎಂಟು ಸಾವಿರ ಮಾತ್ರ)ಗಳ ಬಾಡಿಗೆಯನ್ನು ನಿಗಧಿಪಡಿಸಿಕೊಂಡು ನಿಯಮಾನುಸಾರ ಅಗತ್ಯ ಷರತ್ತುಗಳನ್ನು ಒಳಪಡಿಸಿಕೊಂಡು ಬಾಡಿಗೆಗೆ ನೀಡುವುದೆಂದು ಸಮಿತಿಯು ತೀರ್ಮಾನಿಸಿತು.**

**(ಎಂ.ಕೆ. ಗುಣಶೇಖರ್)**
**ಅಧ್ಯಕ್ಷರು**
**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ**